ಕಸ್ತೂರಿ ನಾಲಿಕಾ

ಮಲ್ಲಿಕಾ

ಕಸ್ತೂರಿ ಮಾಲಿಕಾ

ಮಲ್ಲಿಕಾ

ಅಪ್ರಗಲ್ಭಸ್ಯ ಯಾ ವಿದ್ಯಾ
ಕೃಪಣಸ್ಯ ಚ ಯುದ್ಧನಂ
ಯಚ್ಚ ಬಾಹು ಬಲಂ ಭೀರೋಃ
ವ್ಯರ್ಥಮೇ ತತ್ ತ್ರಯಂ ಭುವಿ||

Kasthuri Malika In Kannada by 'Mallika'
Published by Lakshmi Prakashana,
170, Langford Road, Bangalore-560 025.

ಪ್ರಥಮ ಮುದ್ರಣ : ೧೯೮೬
ದ್ವಿತೀಯ ಮುದ್ರಣ : ೧೯೮೯

—: ಎಲ್ಲಾ ಹಕ್ಕುಗಳನ್ನೂ ಕಾಯ್ದಿಡಲಾಗಿದೆ :—

ಬೆಲೆ : ಹದಿನಾಲ್ಕು ರೂಪಾಯಿ

ಮುದ್ರಕರು :
ನ್ಯೂ ಐಡಿಯಾಸ್
30, 15ನೇ ಅಡ್ಡರಸ್ತೆ
ಮೂರನೆಯ ವಿಭಾಗ ಜಯನಗರ
ಬೆಂಗಳೂರು–560 011

ಕಸ್ತೂರಿ ನೂಲಿಕಾ

ಮಲ್ಲಿಕಾ

ಲಕ್ಷ್ಮೀ ಪ್ರಕಾಶನ
170, ಲ್ಯಾಂಗ್ ಫೋರ್ಡ್ ರೋಡ್
ಬೆಂಗಳೂರು–560 025

ಪರಿವಿಡಿ

ಮಹಾತ್ಮಾ ಗಾಂಧೀಜಿ

ಓ ! ಮಹಾನ್ ಶ್ರೀಗುರುವರ,
ಮಹಾತ್ಮ ಗಾಂಧೀಜಿಯೆ !
ನೀನೆಲ್ಲಿರುವೆ ತಂದೆಯೇ,
ನಿನಗೆಂತೊರೆವೆ ನಮ್ಮಯ ಕಡು ಸಂಕಟವ ?
ಅಂದು ನಿನ್ನೊಂದಿಗೆ ಎಳೆಸೇರಿಸಿ
ಹೊಸೆದು ಹುರಿಗೊಳಿಸಿದವೊಲ್
ನೆರೆದು ಭುಜಗೊಡುತಿರ್ದ ಹಿರಿಯರ್
ಕಿರಿಯರ್ ಪೆಂಗಳೆಯರ್
ಎಂತಪ್ಪ ಒಗ್ಗಟ್ಟಿನಲಿ
ದುಡಿದು ನಿನ್ನಂ ಬೆಂಬಲಿಸಿದರಲ್ತೆ ?
ಇಂದವರೆಲ್ಲ ನಿನ್ನೊಡನೆ
ನೇಪಥ್ಯಕೆ ಹಾರಿದರಯ್ಯ ಬೆಂಬಡಿದು.
ಇನ್ನೆಲ್ಲಿಯ ಜೀವನೀಯ ಸ್ವಾಂತನ ?
ಶಾಂತಿ-ಸಮಾಧಾನ-ಗೌರವಮಾನ ?
ಎಲ್ಲರ್ ಅಧಿಕಾರ ಲಾಲಸೆಯಲಿ
ನಾಮುಂದು ತಾಮುಂದು
ಎಂದೆನುತ ನುಗ್ಗುತಿಹರಲ್ತೆ-ಅನ್ಯಾಯ-ಅನೀತಿಗಳ
ಬೆಂಬೊತ್ತಿ. ಇಂದು ಏವೇಳ್ವೆನೊ
ಭಾರತದ ಸ್ಥಿತಿಗತಿಯ ?
ನೀಂ ಮನಗೊಟ್ಟು ಪರಾಮರಿಸೈ
ಲೋಕ ಪೂಜಿತ ಶ್ರೀಕರನೇ !
ಭಾರತದಗಲ ಹರದಿದೆ ನೆತ್ತರಿನ ಹಿಂಹೊಳೆ !
ಭಾರತವಿಂದು ಭಾರತವಾಗಿ ಉಳಿದಿಲ್ಲವೈ

→

ನೇಪಥ್ಯವೇರಿದ ನೀನಿಂದು ಕಾಂಬೆಯಾ
ನಮ್ಮಯ ಕಡು ಸಂಕಟವ ?
ಧರ್ಮಗೊಲೆ, ನೀತಿಗೊಲೆ, ನ್ಯಾಯಗೊಲೆ
ಪೆಣ್ಗೊಲೆ–ಅವ್ಯಾಹತ ಪೆಣ್ಗೊಲೆ
ನಡೆದಿದೆ ನೋಡಾ ಕರುಣೆಯಿಲ್ಲದಿನಿತು ;
ದಯೆ–ದಾಕ್ಷಿಣ್ಯವೂ ಇಲ್ಲದೆಯೆ ನಿತ್ಯ ನಿರಂತರ !
ಎಂದೆಂದಿಗೂ ಕೊನೆಗೊಳ್ಳದಾ ಕೊಲೆಗೇಡಿತನ !
ನೀನಿನ್ನೊಮ್ಮೆ ಮರವುಟ್ಟಿ ಬಾರಯ್ಯ
ಸತ್ಕೀರ್ತಿ ಕಳಸಧಾರಿ !
ಕರ್ಮ ಯೋಗದ ಸಿದ್ಧ ಪುರುಷ !
ನೀನೇ ಜಗದ ಪರಮ ಬುದ್ಧ !
ನೀನಿಲ್ಲದೆತ್ತ ಭಾರತೋದ್ಧಾರ ಪೇಳ್
ನೀನಿಲ್ಲದೆ ಭಾರತವೆಂತಪ್ಪದು ಭಾರತ ?
ಹೇ, ಅಹಿಂಸಾಶೀಲ ಗುರವೇ !
ನೀನಿಲ್ಲದೆ ಹಿಂಸೆ ನಿಲ್ಲಲುಂಟೇ !
ನೀ ಬಂದು ಉದ್ಧರಿಸಯ್ಯ ಅಬಲೆಯರ
ಹೇ ದೀನ ದರಿದ್ರರ ಬಂಧು !
ಕೈ ಮುಗಿದು ಕಾಲ್ವಿಡಿದು ಬೇಡುವೆ
ನೀನಿಲ್ಲದೆಂತು ಬದುಕು ಸುಂದರ ?
ದೀನೋದ್ಧಾರ,
ಅಂತ್ಯಜೋದ್ಧಾರ,
ಸ್ತ್ರೀಜನೋದ್ಧಾರ
ಎಲ್ಲವೂ ಕನಸಿನ ಗಂಟಾದುದೇ ?
ಸ್ವಾತಂತ್ರ್ಯ ಸವಿಯಿಂದು ಕಹಿಯಾಗಿ

→

ಒಡಲ ಬಳ್ಳಿಯಂ ಸುಡುತಿದೆ ಧಗಧಗಿಸಿ
ಅಂ ತಾಳಲಾರೆನೋ ಗುರುದೇವ !
ಜೀವನ ಮಾರ್ಗಯೋಗ ಕತ್ತರಿಸುತಿದೆ
ಕಡು ಕತ್ತಲೆಯು ತುಂಬಿ
ಉದ್ಧರಿಸು ತಂದೆಯೇ !
ಹೇ ಶಾಂತಿದೂತ ಮಹಾತ್ಮನೇ !
ನಿನಗಂ ಕವಯಿತ್ರಿಯ ನಮನ
ಆರ್ಶಮೊರೆಯಲಿ ಬೇಡುವೆ
ನೀ ಮರು ಹುಟ್ಟು ಪಡೆದು ಬಾರಯ್ಯ ತಂದೆಯೆ !

—o—

ಬದುಕು

ತನುವಿಲ್ಲದೆ ಪ್ರಾಣವುಂಟೇ
ಪ್ರಾಣವಿಲ್ಲದೆ ಮನವುಂಟೇ
ಮನವಿಲ್ಲದೆ ಮತಿಯುಂಟೇ
ಮತಿಯಿಲ್ಲದೆ ಚಿತ್ತವುಂಟೇ
ಮನಃಚಿತ್ತಗಳ್ ಅರಳದೆ
ಬದುಕು ಸುಂದರವಪ್ಪುದೇ

ಬಾರೈ ಒಡೆಯಾ

ಲೋಕದ ಬನದಲಿ ಅರಳಿದ ಪೂಗಳು
ಹಚ್ಚನೆ ಹೊಲದಲಿ ಮೇಯುವ ಗೋಗಳು
ಮಾಮರದಲಿ ಹಾಡುವ ಕೋಗಿಲೆಗಳು
ನಿನ್ನಿರುವನೆ ಸಾರಿ ಹೇಳುತಲಿಹವು.

ದಿನದಿನ ಪ್ರತಿದಿನ ಮನಂ ದಣಿವನ್ನ
ನೋಡುವೆನೆಲ್ಲಿಯು ನಿನ್ನಂ ಸುಂದರ
ಸುಮನಸ ವೇಶದಲಿ ಮೇಣ್ ದೀನರ
ದೀನಾದೀನತೆಯಲಿ ಹೇ ಭಗವನ್ !

ಹೊಟ್ಟೆಗೆ ಹಿಟ್ಟಿಲ್ಲದಿದ್ದರು ದುಡಿಯುವ
ಗೋಜಿಗೆ ಹೋಗದ ಮುಗ್ಧರ ಗತಿಯಲಿ
ಮೈಯನು ಮುಚ್ಚಲು ಬಟ್ಟೆಯು ಇರದಿರೆ
ಮದ್ಯವ ಸವಿಯುವ ಮತಿಹೀನತೆಯಲಿ

ನಿನ್ನನೆ ನೋಡುತ ನೆನೆಯುವೆ ಅನುದಿನ
ಜಡತೆಯ ಮರೆಯದೆ ಬಾರಾ
ಜೀವನ ಸಂಕಟ ಜಾಡಿಸಿ ದೀನರ
ಪಾಲಿಸೆ ದಯದಿಂ ಬಾರೈ ಒಡೆಯಾ !

—o—

ಪ್ರೊನ್ನೇಸರ್

ನಿಸರ್ಗ ಸೃಷ್ಟಿಯು ಎನಿತೆನಿತು
ಸುಂದರ !
ಮಾನವ ಜನ್ಮವು ಎನಿತೆನಿತು
ಬಂಧುರ !
ಮೂಡಣ ಗಗನದ ಅಂಚಲಿ ಮೂಡಿ
ಬನದಲಿ ಪಲ್ಲವ ಪಾಣಿಯು ತೊಳಗಿ
ಗರಿಕೆಯು ಎಸಳಿನ ಹನಿಗಳ ಬೆಳಗಿ
ನಿಂದಿದೆ ನೇಸರು ಗೆಳೆಯರೆ ನೋಡಿ !

ಕೊಂಕಣ ಮಾರುತ ಮೆಲ್ಲನೆ ಬೀಸಿ
ಬಿಂಕದಿ ಬರುತಿದೆ ಸುಯ್ಯನೆ ರಾಚಿ
ಬೆಳಗಿನ ಸೊಬಗಿನ ಸೊಂಪನು ಹೀರಿ
ನೇಸರು ಬೆಳಗಿದೆ ಮಕ್ಕಳೆ ನೋಡಿ !

ಮಾವಿನ ಪೂಗಳು ಅರಳಿರೆ ಹಿಗ್ಗಿ
ಚೆಂದದಿ ಕೊರಲಿನ ಚೆಂಕೃತಿ ಹರಿಸಿ
ಮಧುವನು ಹೀರಲು ಬಂದಿವೆ ದುಂಬಿ
ಪೂವಿಂ ಪೂವಿಗೆ ಹಾರುತ ಚಿಮ್ಮಿ

ಸುಂದರ ಮೋಹನ ನೇಸರ ಕಾಂತಿ
ಚಂದಿರನಂದದಿ ಕೋಮಲ ಹೊಂದಿ
ಸಜ್ಜನ ಶಾಂತಿಯು ನೇಮದಿ ನಿಂದ
ಅಂಬರ ಭಿತ್ತಿಯು ಕಂಗಳೆ ನೋಡಿ !

—o—

ಗೋವಿಂದ ಪೈ

ನಿನ್ನಂತನಿ ಪೊಳ್ತಿನಲಿ ನೆನೆವುದೆ ನಾನಿಂದು
        ಸಲಿಸುವ ವಿನಮ್ರ ವಂದನಂ ಹೇ ವರ ಕವಿಯೆ !

ನಿನ್ನ ಕೀರುತಿ ಪರಿಮಳ ಸಾಹಿತ್ಯ ಲೋಕದಲಿ
        ಮಾತ್ರವೋ ? ಸನ್ನಡೆ–ನುಡಿಯಲಿ ಸುಜ್ಞಾನದಾ

ಓಜೆಯಲಿ ಸ್ನೇಹ ಸಂಪತ್ತಿಯಲಿ ತೊಳ ತೊಳಗಿ
        ಬೆಳಗಿ ಅಮರನಾದೆ ಕರ್ನಾಟಕ ಕವಿವರ್ಯನೇ !

ನಿಚ್ಚ ಪೂರ್ವೇತಿಹಾಸದ, ಸಾಹಿತ್ಯಲೋಕದ
        ಸಂಸ್ಕರಣ ಯಾಗದಲಿ ಶ್ವೇತಾಗ್ನಿ ಜ್ವಾಲೆಯಲಿ

ಧಗಧಗಿಸಿ ಸೆಳೆದಿರೆ ತನುಮನ ಇನ್ನೆಲ್ಲಿ ನಿಜ
        ಬಾಳಿನಾಸೆ ನಿನಗೆ ? ಸತಿ ಲಕ್ಷ್ಮಿಯುಂ ಸಗ್ಗಮಂ

ಪುಗಲ್ ನಿನಗಣಂ ಬಿಡುತೆ ದೊರೆತುದು ಜಾಗೃತಿಯ
        ಜೀವನಕೆ, ಏಕಾಂತ ಚಿಂತನೆಗೆ ಮೇಣೆಲ್ಲ

ಕಾರ್ಯಕಾರಣ ನಿಯತಿ ನಿಯಮಕೆ. ಮನೋದಧಿಯ
        ರಕ್ತಿಮ ವಿಭೂತಿಯೊಳೆ ಮೈವೆತ್ತುದು ಲೇಖನ

ಕೃಷಿ ಮಿಸುನಿಯ ಬೆಳೆಯೊಲ್ ಸ್ವಚ್ಛ ಸುಂದರಮಾಗಿ.
        ಸತೀ ಲಕ್ಷ್ಮಿಯು ನೆಲೆ ಕವಿತಾ ಲಕ್ಷ್ಮಿ ಆಕ್ರಮಿಸೆ

ಫಣಿಯೊಲ್ ಹೆಡೆಯೆತ್ತಿದ ನಿರಂಕುಶ ಮತಿಗೆ ಕಾವ್ಯ
        ರಸನೆಯ ಕಡಿವಾಣವನಿಕ್ಕಿ ಜಗಬೆಳಕಿನಿಂ

ದೂರೈಸಿ ಕಡಲ ತಡಿಯ ಏಕಾಂತ ತಪಸ್ಸಿಗೆ
        ಎಳೆದು ತರಲಾ ಶಾಂತಿ ಸಮುದಿತ ಜೀವನದಿ

→

ಭಾವಾಗ್ನಿ ಉಜ್ವಲಿಸಿ ಆತ್ಮ ತಾ ವಿರಾಟದಿ
    ವಿಹರಿಸುತಿರೆ ಗಹನತರ ಕಾವ್ಯರಸ ಧಾರೆಯಲಿ
ಕೊಚ್ಚಿ ಹೋದುದ್ದೆ ಕಾಲವಹ್ನಿ ವರ ಸಲಿಲದೊಲ್ !
    ದಿನದಿನಂ ಪ್ರಕೃತಿಯ ಸಂಸರ್ಗದ ಕಾವ್ಯರ್ಷಿ
ಕೋದ ರಾಗಾನುರಾಗದ ಭಾವಗೀತೆಗಳ
    ಚೆಂಗಟ್ಟು ಅಮರ! ರಸಋಷಿಯು ಅಮರ; ಉಜ್ವಲ
ಭಾವಾತ್ಮಕ ಶ್ರದ್ಧೆಯು ಅಮರ ; ಪ್ರಕೃತಿಯೆನೆ
    ಕೃತಿಗೆಯ್ದು ಕಾವ್ಯರಸಧಾರೆ ಅಜರಾಮರ ;
ಸ್ವರ್ಗೀಯ ಚಿತ್ರವಾಸಿನೀ ಸತಿಗೆ ದಿನದಿನ
    ಪೂವ ಮುಡಿಸಿ ವಂದಿಸಿ ಆರಂಭಿಸೆ ದಿನಚರಿ
ಅಮರ್ತ್ಯ ಸತಿಯೆ ಸ್ಫೂರ್ತಿ ರಾಷ್ಟ್ರಕವಿ ಪ್ರಶಸ್ತಿಗೆ !

—o—

ಸೋಲು

ಜನಸೋಲು ಶಕ್ತಿಯ
ಕೊರತೆಯಿಂದಲ್ಲವೋ
    ಮನಸ್ಸಿನ ನಿರ್ಧಾರದ
    ಕೊರತೆಯಿಂದ ಕಣಾ !

— o —

ದೀಪಾವಳಿ

ಥಳಥಳಿಪ ಪೊಂಜುಗಳು ಧಗಧಗ ಉರಿದಿರೆ
ಬಲ್ಮೆಯಿಂ ರಂಜಿಸುತ ಮನಮನವ ಅಡರಿತೋ
ದೀಪಾವಳಿಯು ದೇಶವ್ಯಾಪಿ ಸಡಗರ ಸಂಜೆ !
ಪಟಪಟ ಚಟಚಟ ಉರಿಯುತ ಸಿಡಿವ ಪಟಾಕಿ !

ದಡಾಕಿಗಳ ಸರಸ ಮಧುರಾ ಮೋದದ ಭೇಟಿ !
ಮಕ್ಕಳ ನಗೆಮಾತುಗಳ ಆನಂದದ ಕೂಟ !
ಖಂಜನ ಸಖನಸ್ತಮಯನಾದಂ ಸೀಮೆಯಲಿ.
ಮುಸ್ಸಂಜೆಯ ಕರಿಮುಸುಗಿದುದು ಧರೆಯಲಿ.

ಪಡುವಣ ದಿಶೆಯು ಕನಕ ರಾಜಿಯಂ ತಾನುಂಗಿ
ಕತ್ತಲೆಯು ಕಾವಳಿಸೆ ದೀಪಾವಳಿ ಸಡಗರ
ಮೇರೆ ಮೀರಿದುದು ಜನ ಜಂಗುಳಿಯ ವಸತಿಯಲಿ
ಸಾಲುಸಾಲೆನೆ ಮನೆಯ ಮುಂದೆ ದೀಪಿಕೆಗಳಿಟ್ಟು

ದಿಕ್ಕುದೆಶೆಗೆ ಸಿಡಿದ ಕಿಡಿಕಿಡಿಗಳ್ ಉಜ್ವಲಿಸಿ
ಸುರಲೋಕದ ರಂಜನೆಯ ನೀಡಿತು ದೀಪಾವಳಿ !
ದಿವ್ಯ ಜ್ಯೋತಿಗಳುರಿಸಿ ಬೆಳಗಿತು ದೀಪಾವಳಿ
ಮನದ ಕತ್ತಲೆ ಹರಿಯೆ ಮನೋಜ್ಞಮಾ ಜ್ಯೋತಿ !

ಕವಯಿತ್ರಿಯುಂ ಭಾವಿಸೆ ಕವಿತಾರಮಣಿಯಂ
ಏಂ ರಸಮತಿಗೌತಣಮೊ ಎನ್ನ ಮಾದೇವನೇ !

—o—

ಕಂದ ಏಸುಕ್ರಿಸ್ತ

ಶ್ರೀ ಚಿತ್ರವಾಸಿನಿ ಮಹಾ ಸೌಮ್ಯ ರೂಪಿಣೀ
ಮಾತೆ ಮೇರಿ ಶಿಶು ಏಸುವಂ ನಲ್ಮೆಯಿಂದೆತ್ತಿ
ಹೃತ್ ಕರಂಡದ ಪ್ರೇಮಮಂ ಸೂಸಿ ಎಳೆ ಮುಗುಳ
ಸುಹಾಸಂ ತೊಳಗಿ ಬೆಳಗಿಹಳ್ ದೇವತೆಯೊಲ್ !
ಕಂದನಂ ಜಗನ್ಮಹಾ ಪ್ರಭುವಿನ ನೇಮದಿಂ
ಸದ್ಗುರುವಿನ ಗೌರವದಿಂ ದಿವ್ಯ ದಾರ್ಶನಿಕನ
ಭಕ್ತಿಯಿಂ ಆನಂದ ಮೋದದಿಂ ಎದೆಗೊತ್ತಿ
ಮುಗ್ಧ ಪೆರ್ಮೆಯಾಗರ ಸುಖಂ ಕಣ್ತುಂಬಿ ಮನ
ತುಂಬಿ ತುಳುಕುವೊಲ್ ಭಾವೋನ್ಮತ್ತ ಮಾತೆ ಕಣ !
ನೋಡಾ, ಹಸುಕಂದನ ಮುದ್ದು ಮೊಗದ ಅನನ್ಯ
ಅನುಪಮ ಸತ್ ಶಾಂತಿಯ ಸೌಂದರ್ಯದೈಸಿರಿಯಂ !
ಅಮರ್ತ್ಯರ್ಗಲ್ಲದೆ ಮರ್ತ್ಯರಿಗಕ್ಕುಮೇ ಮಹತ್
ಸುರ ಸೌಮ್ಯವೇಶಂ ! ಬೆಣ್ಣೆ ಬೊಂಬೆಯೊ ಅರಳೆಯಿಂ
ಅರಳ್ದುದೊ ಪೂವಿಂ ಪೊದಳ್ದುದೊ ಎನಲ್ ತನಗೆ
ಎಣೆಯಿರದ ದೇವಾತ್ಮ ಸಂಜಾತನನು ನೋಡ !
ಆಪನಿತು ಅಂತಃಚಕ್ಷುವಂ ಅರಳಿಸಿ ನೋಡ !
ಎಳೆಕಂದನೀ ಜಗತ್ ಶೋಭೆಯೀ ಪ್ರೀತಿಯೀ
ಸುಜ್ಞಾನದೀ ಶಾಂತಿಯೀ ಜಗತ್ಪ್ರೇಮದೀ
ಅನನ್ಯ ಮಹಿಮೆಯೀ ಮನುಕುಲದ ಸುಧಾ ಸಿಂಧು
ಪರಿಪೂರ್ಣವೀ ದೇವಸುತನ ಧರ್ಮ ಖನಿಯೀ
ಮುಖ ಭಾವದಿ ಪೊಣ್ಮಿದ ಆತ್ಮಜ್ಞಾನವೀ ಶಿಶು
ದೇವತನಮಂ ಜಗಕೆ ಪ್ರಸರಿಸುವುದ ನೋಡ!
ಲೋಕ ಪ್ರವೃತ್ತಿಗೆ ಜಗದ ಜಂಜಡಕೆ ತಾನೆ
ಮರುಗುವ ಮಹೋದಯನ ಹೃದಯ ವೈಶಾಲ್ಯತೆಯು →

ಕಣ್ಣುಗಳಲಿ ತುಂಬಿಹ ಶಾಂತಿರಸದಲಿ ನೋಡ !
ನೋನೋಡಿ ಮನತುಂಬಿ ಕಣ್ಮುಗಿದು ಕೈ ಮುಗಿಯಾ !
ದೇವಾತ್ಮನ ಗುರುತಿಸುವುದೆ ಜೀವಾತ್ಮನ ಪರಮ
ಗಂತವ್ಯ ! ಹೃದಯ ಸ್ಫೂರ್ತಿಯಾಗರ ! ಪರಲೋಕ
ಸಾಧನೆಗೆ ಸತ್ಯ ಧರ್ಮ ನಿಷ್ಠೆಯ ಉಗಮ ಕಣ !
ಪರಮಾತ್ಮ ದೇಹಾತ್ಮಗಳ ಧರ್ಮ ಯೋಜನಾ
ಮೈತ್ರಿ ಕವಯಿತ್ರಿಯ ಪರಮ ಕಾವ್ಯ ಕಗ್ಗರಸ
ವಾಹಿನಿಗೆ ನಿಚ್ಚ ಎಣೆಯಿಲ್ಲದಾ ಮನಸಾಕ್ಷಿ !
ಮೇಣ್ ಯೋಚನಾ ಪರಿಕಲ್ಪನೆಗೆ ಆತ್ಮಸಾಕ್ಷಿ !

—೦—

ಹೇ ಪರಮಾತ್ಮ ಹರೆ

ಬಾರ ನೀ ಬಾರ ಕೈ ಮುಗಿದು ಬೇಡುವೆ ತೆರೆದ
ಎನ್ನ ಹೃದಯ ನಿಕುಂಜಕೆ ಹೇ, ಪರಮಾತ್ಮ ಹರೆ !
ಬನದ ಹಾದಿಯುಲಿ ನಿನ್ನ ನೂಪುರದ ಟಂಟಣಿ
ನಾದವೊರೊರ್ಮೆ ಕೇಳಿ ಬಪ್ಪುದು ಮಿಡುಕುವೊಲ್
 ಮನವೆನ್ನ. ಮತ್ತೊರ್ಮೆ ಗಾಳಿಯಾ ಸುಯ್ಲಿನಲಿ
 ಕೇಳಿಪುದೈ ಕೊಳಲ ನಾದ ಹೇ, ಪರಮಾತ್ಮ ಹರೇ !
ಬನದಂಚಿನ ಜಲರಾಶಿಯ ಜುಳುಜುಳು ನಿನಾದವ
ನೋಲೈಸಿ ಸುಮಸೌರಭವ ಆಸ್ವಾದಿಸಿ ಮನದೆ
 ಹರುಷವಂ ತುಂಬಿಕೊಳುತ ನೀ ಬಾರ ಎನ್ನಯ
 ಹೃದಯ ನಿಕುಂಜಕೆ ಹೇ, ಪರಮಾತ್ಮ ಹರೇ !
ಮೂಡಣ ನೀಲಿಯಲಿ ಮೂಡುತ್ತೈತರಲಾ
ಬಾಲ ಭಾಸ್ಕರ ಜಗಜಗಿಪ ಪೊಂದೇರನೇರಿ
 ಭೂಲೋಕದ ಚೆಲುವಿಗೆ ಹೊನ್ನ ವರ್ಣದ ಲೇಪವ
 ಒತ್ತಿಯೊತ್ತಿ ನೀ ಬಾರ ಹೇ, ಪರಮಾತ್ಮ ಹರೇ !

—೦—

ಬೇಲೂರು ಶಿಲ್ಪಕ್ಷೇತ್ರ

ಬೇಲೂರು ಚೆನ್ನಕೇಶವ ಪ್ರಸಿದ್ಧಿ ! ಮೇಣ್
ಭವ್ಯ ದೇಗುಲಂ ಪ್ರಸಿದ್ಧಿ ! ಬೇಲೂರಲ್ಲಿಂ.
   ಚೆನ್ನಕೇಶವರಾಯನ ನೆಲೆಗೊಳಿಸಲ್ ಶಿಲ್ಪಿ
   ಜಕಣಾಚಾರ್ಯರ್ಗಂ ಗೈದ ಮಾದೇಗುಲಂ ಜಗದ
ಅದ್ಭುತಗಳ ಸಾಲಿಗೆ ಸೇರುವನಿತು ಭವ್ಯಂ !
ದಿವ್ಯಂ ! ಸುರಸುಂದರ ಶಿಲ್ಪಕಲೆಯ ಕ್ಷೇತ್ರಂ.
   ಮೇಣ್ ಭಕ್ತಜನ ಪರಿಪುಣ್ಯ ಯಾತ್ರಾಸ್ಥಲಂ.
   ಓವೊ ! ಎಂತಪ್ಪ ಸೂಕ್ಷ್ಮ ಶಿಲ್ಪಕಲೆ ? ಅಮೋಘ–
ಅಪೂರ್ವ–ಅವರ್ಣನೀಯ ಕಲಾ ವಿಶೇಷಂ !
ದೇಗುಲಮೆಲ್ಲಂ ದೇವದೇವಿಯರ ನಿವಾಸಂ.
   ನೋಡಿದನಿತು ಭಾವಿಸಿದನಿತು, ಧ್ಯಾನಿಸಿದನಿತು
   ಸಾಲದಾ ಕಲಾಶ್ರೀ ವೈಭವೋಪೇತದೀಕ್ಷಣಂ !
ಕಣ್ಮನಂ ಎಂದುಮೆಂದಿಗೂ ತಣಿಯದೀ ವರ
ಕಲೆಯ ಸಂಭಾವನಾ ಮೇಣ್ ಸಂಲೋಕನಾ !
   ಇದೇಂ ಚಿನ್ನದಿ ಕೋದನೆ ಗಂಧದಲಿ ಕೋದನೆ
   ಎಂದಚ್ಚರಿಬಡುವೊಲ್ ನೈಪೆತ್ತ ಕರಶಿಲ್ಪ
ಕಲೆಯುಲಿ ಪೊದಳ್ದ ಗಿಡುಮರ ಬಳ್ಳಿ ಪ್ರಾಣಿಗಳ
ಮೇಣ್ ಹಕ್ಕಿಪಕ್ಕಿಗಳ ಸುಂದರ ಸಹಜತರ
   ಚಿತ್ತಾರಗಳನೆಂತು ಕಠಿಣ ಕರ್ಪು ಶಿಲೆಯೊಳ್
   ಎನಿತು ಕಾಲ ಕಡೆದನೊ, ಆರವಂಗೆ ಗುರವೋ ?
ಹೇ ಚೆಲುವ ಚನ್ನಕೇಶವರಾಯ ! ನಿನ್ನ ವರ
ಸಾನ್ನಿಧ್ಯ ಸ್ವರ್ಗಸುಖ ಎಲ್ಲರ್ಗೆ ನಿಜದಿಂದೆ. →

ನಿನ್ನ ದೇಗುಲವ ಶಿಲ್ಪಕಲೆಯುಲಂಕರಿಸಲ್ಕೆ
ನೀನೇ ಜಕಣಾಚಾರ್ಯಂಗೆ ನೆರವಾದೆಯಾ ?
ಮೇಣಲ್ಲದೆ ನೀನೇ ಕೊರಕೊರೆದು ನಿಜಕಲೆಯ
ಸೃಷ್ಟಿಸಿದೆಯ ? ನಿನ್ನ ಸಗ್ಗ ಸದೃಶ ಗುಡಿಯು
ಧರಣಿಯುಲ್ಲಿರಲೆಂದು ಸ್ವಪ್ರತಿಷ್ಠೆಗಾಗಿ ನೀಂ
ಸೃಷ್ಟಿಸಿದೆಯಾ ಹೇ ಚೆಲುವ ಚೆನ್ನಕೇಶವನೆ !
ಬರಿ ಶಿಲ್ಪಕಲೆಯುಲ್ಲವೀ ದೇಗುಲವು ಸತ್ಯ
ನಿಷ್ಠೆ–ಧರ್ಮನಿಷ್ಠೆ–ಭಕ್ತಿನಿಷ್ಠೆಗಳ ಪ್ರತೀಕಂ !
ಪರಮಾತ್ಮನ ದಿವ್ಯ ಸಾಕ್ಷಾತ್ಕಾರಕಾಗಿಯೆ
ಸೃಷ್ಟಿವೆತ್ತಿಹ ಚೆಲುವ ಚೆನ್ನಕೇಶವರಾಯ !
ಭಕ್ತಿಯುಲಿ ಕೈಮುಗಿದು ಕಣ್ಮುಗಿದು ಯಾತ್ರಿಯೆನೆ
ಬಂದಿರಲ್ ಜಗದ್ ಭವ್ಯಮೀ ಶಿಲ್ಪ ಕಲೆಯಾ
ಮೋಹದಲಿ ನಿನ್ನನೆ ಮರೆವೆನಲಾ ಹೇ, ಸ್ವಾಮಿ !
ಎನಿತೆನಿತು ಬಣ್ಣಿಸಿದೊಡಂ ಬಾರದು ಸಂತೃಪ್ತಿ
ಬರಿದೆ ನೆನೆವೆ ನಾಂ ನಿನ್ನಂ, ನಿನ್ನ ದೇಗುಲಂ
ಮತ್ತಾ ಜಕಣಾಚಾರ್ಯನಂ ಮನದಲನುದಿನಂ.
ಹೇ ಚೆಲುವ ಚೆನ್ನಕೇಶವರಾಯ ನಿನಗೆನ್ನಯ
ಗೌರವಪೂರ್ಣ ವಂದನಂ ! ಪರಮ ವಂದನಂ !
ಕವಯಿತ್ರಿಯ ನಿತ್ಯ ವಂದನಂ !

—o—

ಮಿಂಚುವ ಗಳಿಗೆಗಳು

ದಿನದಿನವು ಮಿಂಚಿ ಬಹ ಮಿಂಚಿ ಹೋಹ
ಸುಗಳಿಗೆಗಳ ಜಾನಿಸುವೋಲ್

ಮನದಲ್ಲಿ ಕೊರಗುವೆ ಏಕೆ ? ಸುಖ–ದುಃಖ
ಬಪ್ಪುದು ಒಂದರ ಹಿಂದೊಂದು

ಹಾವೂ ಹೂವೂ ತಾನಾದ ಗಳಿಗೆ
ಹೋಗಲಿ ಒಂದೊಂದಾಗುರುಳಿ

ಗರಿಕೆಯ ಎಸಳಲಿ ಮಿನುಮಿನುಗುವ ಹಿಮ
ಮಣಿಗಳ ನೆರೆ ನೋಡಿಹೆ ನೀನು

ಅವು ಬಂದುವೆಂತೊ ಪೋದವುದಂತೆಯೆ
ಅವುಗಳ ಅಳಿವು ಉಳಿವುಗಳನು

ನೀ ನೋಡಿಹೆ ಎನಲ್ ಪೇಳುವುದೇಸಿದೆ
ಜನನ ಮರಣ ಅಂತೆಯೆ ಕೇಳ್

ಸುಖದ ಗಳಿಗೆ ಸಾಗಿ ದುಃಖದ ಗಳಿಗೆ
ಮಿಂಚಿ ಬರೆ ಕೊರಗಲೇಕಾವು ?

ದುಃಖ ಸರಿಯೆ ಸುಖದ ಸರದಿ ಬರುವುದು
ಸುಖ ದುಃಖ ಇರಲಿ ಒಂದೊಂದಾಗಿ

—o—

ಕುಖ್ಯಾತಿ

ಭಗವಂತ ಮನುಕುಲಕೆ ಏನೆಲ್ಲ ಭಾಗ್ಯಮಂ
ದಯಪಾಲಿಸಿಹಂ ಲೋಕ ಕಲ್ಯಾಣ ಕಾರ್ಯಕೆ ?
ದುಡಿದು ಒಡಲ್ ತುಂಬೆ ಕೈ ಕಾಲ್ಗಳನಿತ್ತಿಹಂ ;
ಯೋಚಿಸಿ ತಿಳಿಯೆ ಮನಃಚಿತ್ತಗಳಸಿತ್ತಿಹಂ ;
ವಿದ್ಯೆ-ಬುದ್ಧಿ-ಸಂಸ್ಕಾರಗಳಿಗೇಂ ಕೊರವಿಲ್ಲಿ ?
ದೈವ-ಧರ್ಮ-ಸತ್ಯ-ನೀತಿ-ನ್ಯಾಯಗಳ ಸಂಹಿತೆ
ಜಗಕೆ ಪಿರಿದು ಎನೆ ಎನಿತಂದವೊ ಮನಃಪ್ರಾಣಕೆ.

ಒಡೆಯಾ, ಕೈಕಾಲ್ಗಳಿದ್ದವರ್ ದುಡಿದು ತಿಂಬದೆ
ಕೊಲೆ ಮೋಸ ದರೋಡೆ ಸುಲಿಗೆ ಅನೀತಿ ಅನ್ಯಾಯ
ಕಳ್ಳತನಗಳಿಂ ಹೆರರಿಗೆ ಹಾನಿಯೆಸಗಿ ನೆರೆ
ಕಣ್ಣೀರಿನಲಿ ಮುಳುಗಿಸಿ ಕೈತುತ್ತು ಕಳ್ದು ಕಸಿದು
ತಿಂಬುದುಂಟೆ ? ಇಂತಪ್ಪ ಹೇಸು ಬದುಕಿದ್ದರೇಂ ?
ಇಲ್ಲದ್ದರೇಂ ? ಸುಡಲಕ್ಕು ಹೀನ ಬಾಳ್ಕೆ. ದೇಶದ
ಖ್ಯಾತಿಗೆ ಕುಲದ ಮತ್ತಂ ಪೆತ್ತೊಡಲ
ಅಕ್ಕರೆಗೆ ಕುಂದು ! ಅವಮಾನದ ನಿಡುಗೋಂಟೆಯ
ಜೀವನಂ ಮನುಜರಿಂಗಕ್ಕುಮೇ ? ಅವಾವ
ಪುಣ್ಯವಶದಿಂ ನರಜನುಮವೆತ್ತಿ ಈ ಭುಮಿಯ
ಸಂಸ್ಕೃತಿ ಮೇಣ್ ಸಂಸ್ಕಾರಗಳ ಪರಿಮಳಂ
ಕೈ ಸಾರ್ದುದೊ ಅದಂ ರಾಷ್ಟ್ರಸೇವೆ-ಸಮಾಜ ಸೇವೆ
ಮುಂತಪ್ಪ ಪುಣ್ಯಕಾರ್ಯಗಳಿಗೆ ವಿನಿಯೋಗಿಸಿ
ಪುಣ್ಯವಂತರಾಗದೆ ನರಜನ್ಮಮಂ ವ್ಯರ್ಥ
ಹಾಳುಗೈವರೆ ? ತಿಳಿವಿದ್ದು ಮತಿಗೆಟ್ಟರೆ ಆರ್
ಬಟ್ಟೆ ತೋರ್ಪರ್ ? ಆರ್ ಮರುಗುವರ್ ? ಪಾಪಿಗಳ್
➡

ತಾವ್ ಕೆಡುವುದಲ್ಲದೆ ಕುಲಕೋಟಿಯಂ ಕೆಡಿಸಿ
ಆಪದ್ದೆಸೆಗಿಳಿವರ್. ಏಳೇಳು ಜನ್ಮಗಳಿಂಗೆ
ಮಿತ್ತಾಗಿ ಯುವ ಪೀಳಿಗೆಯ ಜಾನಗೇಡಿಗರಾಗಿ
ದೇಶ ಕಂಟಕರಾಗಿ ಬಾಳ್ವುದೊಂದು ಬಾಳೇ ?
ಹೀನಾತಿಹೀನ ಜನ್ಮ ಕುಖ್ಯಾತಿಯಿಂದೊಪ್ಪಿ
ನರಿ ನಾಯ್ಗಳಿಗಿಂತಲ್ ಕಡೆಯಕ್ಕು ! ಕೀಳಕ್ಕು !

—o—

ಹಂಪೆಯ ಹನುಮ

ಕಾಲಾನುಕಾಲದಿಂ ಹೆಬ್ಬಾಗಿಲಿನ ಬಳಿಯೆ
  ಬಲ್ಗದೆಯ ಹೊತ್ತು ನಿಂದಿರುವನಾರ್ ?
ಕಂಬನಿ ಸುರಿಸುವ ಮೂಕ ಮೌನಿ ಹನುಮಂತನೇಂ
  ಅಹ, ಬೀರರ ಬೀರ ಶಿಲೆಯಾಗಿಹನೆ ?
ಹಾಳು ಹಂಪೆಯ ಕಾಯಲು ಶಿಲೆಯಾಳ್ ಅಲ್ಲದೆ
  ಮತ್ತಾರ್ ಬಂದಿಲ್ಲಿ ನಿಂದಪರಯ್ಯ
ಎನಿತೆನಿತು ಕಾಲಮಾನ ಸಂದುದೊ ನಿನಗಿಲ್ಲಿ ?
  ಎಂತು ಮಳೆಗಾಳಿ ಚಳಿ ಬಿಸಿಲಿನ ಝಳ
ತಾಳ್ದಪೆಯೊ ಕಾಣೆ ನಾಂ. ನನ್ನ ಕರುಣೆಯ ಕಟ್ಟೆಯು
  ಬಿರಿದು ಕರಗಿ ನೀರಾಗಿ ಹರಿವವೊಲ್
ತೋರುತಿದೆ. ಮರುಗವೆಂ ಕರಗುವೆಂ ನಿನಗಾಗಿ.
  ಧರಣಿಪರ್, ಮಂತ್ರಿಗಳ್, ಪದಾತಿಗಳ್
ಕಬ್ಬಿಗರ್ ಮೇಣ್ ಶಾಸ್ತ್ರವೇತ್ತರ್ ಬಿಟ್ಟಳಿದ
  ಪಾಳ್ನೆಲವ ಕಾಯ್ವುದು ಜಗತ್ಪ್ರಸಿದ್ಧಿ !
ಮೇಣೆನ್ನ ಕವಿತಾರಸನೆಯುಕ್ಕಿಪ ಚೋದನೆ
  ನಿನ್ನ ಸಂದರ್ಶನದ ಭಾಗ್ಯದಿಂ ಕಾಣೆಲೋ !

—o—

ಚೈತ್ರ-ವೈಶಾಖ

ವಸಂತ ಸಿರಿಯುಬ್ಬುಟೆಯು ತುಂಬಿ ಮುಂದೊತ್ತಿ
ಫುಲ್ಲ ಕುಸುಮಿತ ಪಲ್ಲವರಾಜಿಯು
ವರ್ಣವರ್ಣಾಂತ ಸೌಂದರ್ಯಲಕ್ಷ್ಮಿಯು ರೂಪು-
ರೇಷೆಯಂ ಕಣ್ತುಂಬ ನೋನೋಡಿ
ಹೃನ್ಮನಗಳಲಿ ಹರ್ಷದ ಹೊನಲಂ ತುಂಬಿಕೊಳೆ
ರಸಾಬ್ಧಿಯ ಆಳಗಲ ಅದ್ಭುತವಿರಲಕ್ಕು.

ವಸಂತ ಪ್ರಭುವಿನ ಒಡ್ಡೋಲಗಕೆ ತೋಷದಿಂ
ಮುಂಗಾರ್ಮಳೆ ಮಾರ್ಗಾಲಿಡುತ ಬರೆ
ಹಸುರಿನಲಿ ನೆರೆಯುಕ್ಕಿ ಪಚ್ಚವಾರ್ಧಿ ಥಳಥಳ
ಥಳಿಸುತ ನಯನ ಬಂಧುರ ವೇಶದಿ
ಮೆರೆಯಲಾ ಸೌಂದರ್ಯನಿಧಿ ಸತ್ಯಸುಂದರಂ
ಚೈತ್ರ-ವೈಶಾಖ ಪ್ರಭು ಉಷ್ಣೋಷ್ಣ ಬಂಧುರಂ !

ವನರಾಜಿಯುಟ್ಟ ಸಿರಿ ಸೊಬಗುಗುವ ಪಟ್ಟುಡೆಯು
ಮುಂಬೆಳೆದು ಹಣ್ಣಾಗಿ ಉದುರುದುರಿ
ಹೊಚ್ಚ ಹೊಸ ಚಿಗುರೊಡೆದು ಆವರಿಸೆ
ಪಚ್ಚಗಡಲ್ ತರಂಗತರಂಗ ಮಧುರಂ.
ವಸಂತ ಪ್ರಭು ಧರೆಗಿಳಿದನೆನಲ್ ರಾಮಣೀಯಕ
ದೃಶ್ಯ ವೈಭವಂ ಮಿರಿದತ್ತು ಸ್ವರ್ಗಲೋಕಂ !

ಪೂರ್ವೀ ದಿಗ್ದೇಶದಲಿ ಮೂಡಿಬರೆ ದಿನಕರ
ಪ್ರಾತಃಸಮಯವಂ ವಿಜೃಂಭಿಸುತ
ಉಜ್ವಲೋಜ್ವಲ ಕಿರಣಧಾರೆಯಂ ತಾ ಸೂಸಿ.
ಬೆಳ್ಮುಗಿಲ್ ಮಂಜುವಾಹಿನಿಯಂಚು
ಕನಕ ರಂಗಿನಿಂದೊಪ್ಪಿ ಮನೋಹರ ರಾಗದಿಂ
ಕಣ್ಗೆಡ್ಡವಾದುದು ಸುರಸುಂದರ ರೂಪಿನಿಂ.

ಭ್ರಮಂತ ಭ್ರಮರಂಗಳ ಪಿರಿದಂಡು ರ್ಝೇಯೆಂದು
ಝೇಂಕರಿಸಿ ಪೂವಿಂ ಪೂವಿಂಗೆ
ಪಾರ್ದು ಮಧುವಂ ಪೀರ್ದು ಮುದದಿಂ ತೋಷದಿಂ
ನಲಿದಾಡುತಲಿ ಪಾಡಿ ಪಾರಾಡಿ
ಝೇಂಕಾರವನೋಂಕರಿಸುತಿನೆ ಜಗ
ಮರೆತು ರವಿದರ್ಶನದಲಿ ತನುಮನ ಮತ್ತೇರಿ !

—o—

ಮಾತು

ಮಾತಿನಿಂ ನಗೆ ಚಾಟಿಕೆಯು
ಮಾತಿನಿಂ ನೆರೆ ಸ್ನೇಹವು
ಮಾತಿನಿಂ ಮಿಗೆ ಕಲಹವು
ಮಾತಿನಿಂ ಹಗೆ ಕೊಲೆಯು
ಮಾತೇ ಎಲ್ಲಕ್ಕೂ ಮೂಲವಯ್ಯಾ

—o—

ಹೃತ್ ಬನದ ಗುಡಿಗೆ

ಓ ಎನ್ನ ಸಿರಿದೊರೆಯೆ ಎಂದಿಗೈತರುವೆ ನೀ
ನೆನ್ನ ಹೃತ್ ಬನದ ಗುಡಿಗೆ ? ನೀ ಬರುವೆ ಎಂದು
ಕಾದಿಹೆನನುದಿನಂ ಹಗಲಿರುಳೆನ್ನದೆ ಪ್ರಭುವೆ !
ನೋವು–ನಲಿವುಗಳಲಿ ಸುಖ–ದುಃಖಗಳಲಿ ನಿನ್ನ
ಕಾಂಬುದೆನ್ನ ಅಂತಃಚಕ್ಷು ! ಎನ್ನ ನೋವಿನಲಿ
ನಲಿವೆ ನೀನು ! ಮೇಣೆನ್ನ ನಲಿವಿನಲಿ ನೋಯುವೆ
ನೀನು ಪರಮ ಪ್ರಾಣ ಪುರುಷ ! ಅಂದಿಂದಿನೆಮ
ಕಳಕಳಿಯ ಕಾತರ ಕರೆಯನಾಲೈಸಿದೊಡಂ
ಕಣ್ಮನಂ ಮುಚ್ಚಿ ಕುಳಿತರ್ಥವೇನು ರಮಣನೆ ?
ಎನ್ನಂ ಬಳಲಿಸಿ ಹಣ್ಣುಗೊಳಿಸಲ್ ಮನವೆಂತು
ಸಂತು ? ನಾನಿನ್ನ ಪ್ರಾಣ ಪ್ರಿಯದಾಸಿಯಲ್ತೇ ?
ಕಂಡು ಕಾಣಾತೆನ್ನಂ ಕಡೆಗಣಿಪುದು ಸರಿಯೆ ?
ನಿನ್ನ ಹಾದಿಯಂ ನೋನೋಡಿ ಬತ್ತಿದುವೆನ್ನ
ಕಣ್ಣಾಲಿಗಳ್, ಜೀವ ಬೇಡುತಿದೆ ನಿನಗಾಗಿ.
ನೀನೋಯಿಸಿದೊಡೆ ದಾಸಿಯಂ ಕಾವರುಂಟೇ ?
ನಿನ್ನ ಹಾದಿಗೆನ್ನಯ ನಾಲಿಗೆಯನೆ ಹಾಸುವೆ
ಕಲ್ಲುಮುಳ್ಳು ಒತ್ತದವೊಲ್ ನಿನ್ನಡಿಗಳಿಂಗೆ.
ದಿನದಿನಂ ವೃದ್ಧಿಸುತಿದೆ ನಿನ್ನಂ ಕಾಂಬಾಸೆ.
ಎಂದೆಂದಿಗೂ ಕೊನೆಗಾಣದ ಆಸೆಯಲಿ ಸಿಲ್ಕಿ
ಮೊಲ್ಲೆಮೊಗ್ಗುಗಳ ಬಿಡಿಸಿ ತಂದು ವರಮಾಲೆಯ
ನೆಯ್ದು ಕಳಿತ ಹಣ್ಣುಗಳೊಡನಿಟ್ಟು ಕಾದಿರುವೆ.
ಪರಿಮಳದ ಸಿರಿಗಂಧ ಮೇಣ್ ಕೆನೆಹಾಲು ದಧಿ
ಘೃತವ ಹದನಿಸಿರುವೆ ಓ ಎನ್ನ ಸಿರಿಯರಸ !
ಹಗಲಿರುಳು ಉರುಳಿ ವರುಷವರುಷಗಳು ಸಂದುವು

→

ಜೀವನದ ಕಾಲಮಾನವೇ ಕಳೆಯುತಿದೆ ತವ
ದರ್ಶನದ ನೇಮದಲಿ ಕೇಳೆನ್ನ ಕರುಣಾಳು !
ಎನ್ನ ಕಣ್‌ಬೆಳಕು ನಂದುವ ಮುನ್ನ ತವದರ್ಶನ
ಭಾಗ್ಯವಿಹುದೊ ಇಲ್ಲವೋ ಎಂಬ ಶಂಕೆಯಿಂದಲಿ
ಮನವೆನ್ನ ನೊಂದು ನೋಯುತಿರೆ ಶಾಂತಿಯಿಲ್ಲಂ,
ಸಮಾಧಾನವಿಲ್ಲಂ. ಏಗಳುಂ ಕಣ್ಣೊಳ್
ಕಣ್ಣಿಟ್ಟು ಕಾವೆನನುದಿನ ಕೊನೆವರಂ ದೇವ !
ಎಂದಾದಡೆಮ್ಮ ನೀನೈತರಲೆನ್ನೆದೆ ಗುಡಿಗೆ
ಕುಳ್ಳಿರಿಸಲೆಂದಾನು ಕಿರು ಪಚ್ಚೆಗಳ ಕೋದ
ರನ್ನ ಪೀಠವ ಸಿದ್ಧಗೊಳಿಸಿಹೆ ಪರಮ ಪುರುಷ !
ನೀ ಬರುವ ವನವೀಥಿ ಸುರಲೋಕದ ನಂದನ
ವನಮಂ ಬದಿಗೊತ್ತುವೊಲ್ ಸುಂದರ ಹೇರಾಶಿ !
ಎಲ್ಲೆಲ್ಲಿಯುಂ ಮಿಡಿವೊಗ್ಗು ಪೂಗಳ್ ತುಂಬಿ
ಮೋಹನೀಯ ರಾಜ್ಯಂ. ಉದುರಿದ ದರುಗಲೆ ಪುಷ್ಪ
ದಳ ರೇಣು ಕಡ್ಡಿಗಳ್ ಹರಡಿ ಚಿತ್ರವಿಚಿತ್ರ
ರಂಗೋಲಿಯು ಪೊದಲ್ದಿರೆ ಧಿಮಿ ಧಿಮಿ ನಡೆದು ಬರೆ
ಎನಿತಂದವೋ ಅರಣ್ಯ ವೀಥಿ ! ದಳದಳವಿರಿದ
ಮೊಲ್ಲೆ ಸಂಪಿಗೆ ಗುಲಾಬಿ ಜಾಜಿ ಸೇವಂತಿಗೆ
ಪಾರಿಜಾತ ಮುಂತಪ್ಪ ಪುಷ್ಪ ಸಮುಚ್ಚಯದ
ವರ ಕಂಪು ಮುಟ್ಟುಗುಂ ಅಂತರಂಗಮಂ. ಮೇಣ್
ಪೂವಿಂ ಪೂವಿಗೆ ಪಾರ್‍ವ ಭ್ರಮರಗಳ ಝೇಂಕಾರ
ತನು ತುಂಬಿ ಮನ ತುಂಬಿ ಹರಿಯುತಿರಲ್ ನಿನ್ನಂ
ಸ್ವಾಗತಿಸುವುವು ಇಂಪು ತಂಪುಗಳ್ ಒಗ್ಗೂಡಿ !
ತಣ್ಣಗೆ ತನಿಗಾಳಿ ಎಲೆ ಎಲೆಗಳ ಮರ್ಮರಿಸಿ
ರೊಯ್ಯನೆ ಸುಳಿದಾಡಿ ಸುಯ್ ಸುಯ್ಯನೆ ಸುಯ್ದು ಬರೆ →

ರುಂದ್ರಾಟವಿ ಎಂತೆಂತು ಆನಂದ ಮೋದವೊ !
ಮೇಣ್ ಮೃಗ ಪಕ್ಷಿಗಳ ಸಹ ಕೂಟದ ಚಂದಮೇಂ ?
ಕ್ರಿಮಿಕೀಟಗಳ ಜೀಯ್ ಜೀಯ್ ಜೀರ್ದನಿಯು
ಝೇಂಕಾರ ಶೃತಿಯುಂ ಮೋದಮಲ್ತೆ ಸ್ವಾಮಿಾ ?
ಇಂತಪ್ಪ ವೀಥಿಯೊಳ್ ಓಡೋಡಿ ನಲಿದಾಡಿ
ಬರಲೊಲ್ಲೆಯಾ ? ಇಂತು ಸೊಗಮಿರ್ದ ವೀಥಿಯಲಿ
ಗಿಡುಮರಗಳ ಹರೆಗೈಗಳು ಅಲುಗಿ ತಲೆದೂಗಿ
ಬಾಬಾರೆನೆ ಆನಂದದಿಂ ಸ್ವಾಗತಿಸುತಿರೆ
ನಿನ್ನ ಮನವೊಪ್ಪಿ ನಲಿಯದೇನ್ಕೈ ಪರಮಪುರುಷ ?
ಎಮ್ಮೀ ವನ ವೀಥಿಯನೊರ್ಮೆ ಬೊಕ್ಕು ನೋಡಲ್
ಓಡಿಯೋಡಿ ಬಂದಪೆ ಎನೆ ಪೆರ್ಮೆ ಬಲಿವುದೈ
ಹೇ ಎನ್ನ ಮನೋವಲ್ಲಭ ! ಪರಮ ಪ್ರಾಣಪ್ರಿಯ !
ಹೃದಯ ಬನದ ನಾಥ ; ನೀನಿಲ್ಲದೆನ್ನ ಬರ್ದುಕು
ನಡೆವುದೆಂತು ಪೇಳಯ್ಯ ಪರಮ ಕರುಣಾ ನಿಧಿಯೆ !

—o—

ಪುಷ್ಪಾಳಿ

ಹಸಿರ ತಳಿರ ಮೇಲೆ ಅರಳೆ ಹಂಜಿ ಹರವಿದೊಲ್
ಬೆಳ್ಳನೆಯ ಪುಷ್ಪಾಳಿಯು ಸರಮಾಲೆಯು ನೋಡ !
ಕುಸುಮ ರೇಣು ಕುಸುಮದಳ ಅರಳಿ ಘಮಘಮಿಸುವ
ಸುಂದರ ಸುಮಧುರ ಧವಳ ವರ್ಣದ ವಾರಾಶಿ !

ಗಾಳಿಯಲೆಪದಿಂ ಹೂ ಗಂಪಿನ ಹರವು ಎಲ್ಲೆಡೆಯು
ಪಚ್ಚನೆಯ ಹರೆಗೈಗಳ ಚಾಚಿದ ಹೂಗಿಡವು
ಮುದ್ದುಮಗುವಿನೊಲ್ ನಿಂದಿದೆ ಬೆಳ್ನಗೆಯ ಬೀರಿ
ಸುಂದರ ಗಿಡ, ಸುಂದರ ಸುಮ, ಸುಂದರವೆ ಎಲ್ಲ.

—o—

West Minister Abbey

ವೆಸ್ಟ್ ಮಿನಿಸ್ಟರ್ ಆಬೆ! ಇಂಗ್ಲೆಂಡ್ ರಾಷ್ಟ್ರೀಯ
ಐತಿಹಾಸಿಕ ಅದ್ಭುತ ಸುಂದರ ಚರ್ಚ್ ಕಣ!
ಗಾಥಿಕ್ ಶೈಲಿಯ ಪುರಾತನ ಅಂಬರ ಚುಂಬೀ
ಕ್ರಿಸ್ತಾಲಯ ಮಂಗಲಚ್ಛಾಯಂ! ಮಹೋನ್ನತಂ!
ಕರುಣಾಜನಕ ಮಹತ್ತರಂ! ಶಿಲ್ಪ ಕಲೆಯಿಂ
ಚಿತ್ರ ಕಲೆಯಿಂ ಮೇಣ್ ರುದ್ರರಮಣೀಯಮಾದ
ಕಟ್ಟಡದ ಮಹಾ ವಿನ್ಯಾಸದಿಂ ಸುರ ಸುಂದರಂ!
ದೈವಸೃಷ್ಟಿಗೆ ಹೆಗಲೆಣೆಯೊ ಎನಲ್ ಸಗ್ಗ ಸಿರಿ
ಸೊಬಗುಗುವ ಸೌಂದರ್ಯ ಶ್ರೀವಿಹಾರ ರೋಚಕಂ!
ವೈವಿಧ್ಯಮಯ ಜೀವನೀಯ ಗುಣಶೀಲರ
ಭಕ್ತಿ-ಶಾಂತಿಗಳಿಗಾಶ್ರಯವಿಾವ ದೇಗುಲಂ!
ವರ್ಣವರ್ಣಾಂತ ಮನೋರಮಾ ಚಿತ್ತಾರವ
ತಲೆಯೆತ್ತಿ ನೋಡುತಿರೆ ಕೊರಳ್ ಬತ್ತುವನಿತು
ಏರುತ್ತೇರಿ ಮುಗಿಲ್ ಮುದ್ದಿಸುವ ಮಹಾ ಮಂದಿರ
ಜಗದೊಳ್ ಹೆಸರಾಂತ **West Minister Abbey**!
ಅಳಿದರ್ಗೆ ಉಳಿದರ್ಗೆ ನಂಬಿದರ್ಗೆ ಸರ್ವತ್ರ
ದಿವ್ಯ ದೇಗುಲಂ! ಕ್ರಮಿಕ ಮೂಸೆಯೊಳ್ ಪೊದಳ್ದು
ಘನವೆತ್ತು ಮಹೋನ್ನತಿಗೆತ್ತು ಅಳಿ ಅಳಿದಾ
ರಾಜ ರಾಣಿಯರ್, ಗುರುಗಳ್, ಕವಿಗಳ್, ಮಂತ್ರಿಗಳ್
ಶಿಲ್ಪಿಗಳ್, ಸೇನಾನಿಗಳ್ ಸೈನಿಕರ್ ಮೇಣ್
ದೇಶಸೇವಕರ್ ಮುಂತಪ್ಪ ನಾನಾ ವರ್ಗೀಯ
ಪ್ರತಿಷ್ಠಿತರ್ ತಣ್ಣಗೆ ಏಸು ಸ್ವಾಮಿಯ ಕರುಣ
ಕೃಪಾಶ್ರಯದಿ ಮಲಗಿಹರಿಲ್ಲಿ ಚಿರ ಶಾಂತಿಯಲಿ! →

ಎಲ್ಲಿ ನೋಡಿದರಲ್ಲಿ ದೇಗುಲದ ತುಂಬೆಲ್ಲಾ
ಮಡಿದರ ಪೆಸರ್‌ಕಡೆದ ಸಮಾಧಿಯ ಕಲ್ಲುಗಳ್ !
ಕರುಳ್ ಕೋರೈಸುವ ಕರುಣಾಯಿತ ಚಿತ್ತಾರ !
ಗೋಡೆಯಲ್ಲಿ ನೆಲದಲ್ಲಿ ಎಲ್ಲ ಕಡೆಗಳಲ್ಲಿ
ಚಿತ್ರ ವಿಚಿತ್ರ ಹಣೆಪಟ್ಟಗಳುಳ್ಳ ಗೋರಿಗಳು !
ಎಲ್ಲಿಯುಂ ಕಾಲಿಡುವುದೆ ಸಂಕಟವೆನಿಪೊಂದು
ಗೋರಿಗಳ ಹಾಸು ! ನೆಲದಲಿ ಪೆಸರ್ ನೋಡುತ
ದಾಂಟದೊಡೆ ಗೋರಿಗಳ ತುಳಿಯುದುಪಕಾರ ಕಣ !
ಅಹಃ, ಏಂ ಚಿರ ಶಾಂತಿಯೊ ಮಲಗಿರೆ ತಣ್ಣಗಿಲ್ಲಿ.

ಗಗನ ಚುಂಬೀ ಚರ್ಚಿನೆತ್ತರಕೆ ಒಪ್ಪುವ
ಮಹಾಸ್ತಂಭದ ಮೇಲೆ ತೋರ ಸಿಲುಬೆಗೆತ್ತಿಹ
ಏಸು ಸ್ವಾಮಿಯ ವಿಗ್ರಹ ಪೊಚ್ಚ ಪೊಸತೆನಿಪ್ಪ
ಮಾಳ್ಕೆಯಲಿ ತೋರ್ಪುದೈ ರಸಜ್ಞ ಮನೋದಧಿಗೆ !
ಎನಿತೊಂದು ಪುಣ್ಯವಂತರ್ ಪವಡಿಸಿಹರಿಲ್ಲಿ
ಅನಿತೊಂದು ಶಾಂತಿ ಸಾಗರವೇ ಹರಿವುದಿಲ್ಲಿ !
ಪುಣ್ಯವಂತರ್, ಮತಿವಂತರ್, ಸ್ವತಃ ಅಲ್ಲಿಗುಯ್ದು
ಕಣ್ತುಂಬ ನೋನೋಡಿ ಮನವ ತಣ್ಣಿಸಬೇಕೆಲೈ
ಹೇ ಎನ್ನ ಪರಮ ಬಂಧು ! ಒಮ್ಮೆ ನೋಡಿ ಬಾರೈ !

—o—

ಸರಕಾರೀ ಯಂತ್ರ ದೋಷಕ್ಕೆ....

ಆಡಳಿತ ಯಂತ್ರ ಕುಸಿಯುತ್ತಿರಲ್ ದಿನ ದಿನಂ
ದುರಸ್ತಿಯನರಿತರಿಲ್ಲಂ ; ಚಿಂತಿಸಿದರಿಲ್ಲಂ.
ಮಂತ್ರಿಮಂಡಲ ಬಂದು ಬಂದು ಹೋಹುತಿರ್ಪುದು
ಬರಿದೆ ಎಂಟಾನೆಂಟು ದಿನಗಳ ನಾಟಕವಾಡಿ.
ಕುಮತಿಜನ್ಯವಾದ ಅಕರ್ಮಣ್ಯ ಜೀವನದಿ
ಭೋರಿಟ್ಟು ಭೋರ್ಗರೆದು ಹರಿಯುತಿದೆ ಉಕ್ಕುಕ್ಕಿ
ಮಹಾ ಸಾಗರಕೆ ಹೆಗಲೆಣೆಯೇ ತಾನಾದವೊಲ್ !
ಪ್ರಜಾಪ್ರಭುತ್ವದ ಅಶಾಶ್ವತ ಮಂತ್ರಿಮಂಡಲ
ಹೆಣಗುತಿದೆ ಬರಿದೆ ಲೋಕ ಸೇವೆಯ ನೇಮದಲಿ !
ರಾಷ್ಟ್ರೀಯ ಕಛೇರಿಗಳಲಿ ವರ್ಷಮಾನಂಗಳ್
ದಶದಶಮಾನಂಗಳ್ ಕದಲದಲಿ ಕೊಳೆಯುತಿರ್ಪ
ಎಲ್ಲತರ ದಸ್ತಾವೇಜುಗಳ್ ಅಂದಂದಿಗೇ
ಬಗೆಹರಿಪೊಲ್ ವಾರಾಂತ್ಯದಿ ಎರಡೆರಡು ದಿನಂ
ಕದವಿಕ್ಕಿ ಎಲ್ಲ ದಸ್ತಾವೇಜುಗಳ್ ತೀವ್ರ
ಕಟ್ಟುನಿಟ್ಟನಿಂ ಪರಿಶೀಲಿಸಿ ವಿತರಣೆಗೈವ
ಕಾರ್ಯನಿರ್ವಾಹಕ ಕ್ರಮಮಂ ಕಟ್ಟಾಜ್ಞೆಯೊಳ್
ಜಾರಿಗಿತ್ತು ನಿರ್ಣೀತ ದಸ್ತಾವೇಜುಗಳೆಲ್ಲಂ
ಅಂಚೆಯೊಳೆ ಮನೆಮನೆಗಳ ಪುಟ್ಟಿಸಿದೊಡೆ ನೂಕು
ನುಗ್ಗಲಿನ ಜಂಜಡವೂ ಇಲ್ಲಂ ! ಲಂಚದ ದುಷ್ಟ
ಹಾವಳಿಯುಮಿಲ್ಲಂ ! ಕಟ್ಟಾಜ್ಞೆಯು ಕಟ್ಟುನಿಟ್ಟಿರಲ್
ಕಾರ್ಯವಂಚಿತ ಕೊಡುಗೈಗಳ್ ಮುಂಬರಲೆಲ್ಲಿ
ಅವಕಾಶವಿರ್ಪುದು ಪೇಳ್ ? ಕೊಡುಗೈಗಳಿಲ್ಲದೆ
ಕೊಂಬುದೆಲ್ಲಿ ? ಆವೊಂದು ಕಛೇರಿಯು ತುಂಬಿದ
ವರ್ಷಾಂತ್ಯದಲಿ ಹಳೆ ಪಳೆಯ ದಸ್ತಾವೇಜುಗಳು →

ಹೊಸ್ತಿಲಂ ದಾಂಟಿ ಎಲ್ಲಿಯುಂ ಲಚಾವತಾರಂ ?
ಕಛೇರಿಗಳಂ ಬೊಕ್ಕು ಬೆಚ್ಚನೆಯ ವಾಸದಲಿ
ವ್ಯೈಮನ ಕೊಬ್ಬಿದ ಧಾಂಡಿಗ ಹೆಗ್ಗಣಗಳ್ ಇಂದು
ಆವೊಂದು ಕಟ್ಟುನಿಟ್ಟಿಗೂ ಮಣಿವರಲ್ಲಂ!
ಇದುಂ ಸಾಮಾನ್ಯಮಲ್ತು. ಧರ್ಮನಿಷ್ಠೆ ಮೇಣ್
ಶ್ರಮನಿಷ್ಠೆಯಿಲ್ಲದ ಜನಕೋಟಿ ರಾಷ್ಟ್ರೀಯ
ಬೊಕ್ಕಸಂ ದಯ ದಾಕ್ಷಿಣ್ಯವಿಲ್ಲದೆ ತಿಂದುಂಡು
ಬರಿದು ಮಾಡುವರಲ್ತೆ ದುಷ್ಟ ವಾಘ್ರಗಳವೊಲ್

ಪ್ರಸ್ತುತ, ಬಹುತೇಕ ಸರಕಾರೀ ಅಧಿಕಾರ
ಪೀಠಸ್ಥ ಜನರ್ ನಿರ್ದಯೆ–ನಿರ್ದಾಕ್ಷಿಣ್ಯದಿಂ
ಹರಟೆ–ಕಾಡು ಹರಟೆಯಲಿ, ನಲ್ ಚಹ ಕಾಫಿಗಳ
ಸೇವನೆಯಲಿ, ಬೀಡಿ–ಸಿಗರೇಟುಗಳ ಮೋಜಿನಲಿ
ಹೊತ್ತನು ಕಳೆದು ಸಂಬಳದೊಂದಿಗೆ ಗಿಂಬಳವ
ಪಡೆದು, ಅಧಿಕಾರ ದರ್ಪದಿ ಪ್ರಜೆಗಳನು ಕಾಡಿ–
ಗೋಳಾಡಿಸಿ, ಬೊಜ್ಜು ಬೆಳೆಸಿ ಬಾಳುವರೈಸಿರಿಯಲಿ!

ಹಾ! ಕಲಿತು ಬಲಿತ ರಾಷ್ಟ್ರೀಯತೆಯಿಂತಾದೊಡೆ
ಕನ್ಯಾಕುಮಾರಿಯಿಂ ಹಿಮಾಚಲದವರೆಗುಂ
ಇದುವೆ ಪರಿಪಾಡಲ್ತೆ? ಶಾಸಿತರು ಶೋಷಿತರು
ಮೇಲು ಕೀಳೆನ್ನದ ಪರಿ.

ಇಂತೀ ಕಡುದ್ರೋಹಿಗಳ
ನಿಯಂತ್ರಣಕೆ ಎಲ್ಲ ಬುದ್ಧಿ ಮಾನ್ಯರ್ ಕೆಚ್ಚಿನಿಂ
ಕೆರಳಿ ಮಾಕಾಳಿಯೊಲ್ ಖಡ್ಗವಿಡಿಯೆ ಔಡುಗಚ್ಚಿ,
ಹೇಸು ಬುದ್ಧಿಯ ನೀಚಕಾರ್ಯ ಬಾಲ ಮುದುಡದೆ
ಉಳಿದು ಬಾಳುವುದೆಂತೈ ಈ ಲೋಕ ಬಂಧದೊಳ್?

ಕೀಳು ಬುದ್ಧಿಯ ಕೊಚ್ಚಿ ಖಂಡರಿಸುವುದಲ್ಲದೆ
ಬೇರೆ ದಾರಿಯಿಲ್ಲವೆನೆ ಪೊಯ್ಯು ಬಡಿಯ್ಯೆ ಧೀರ !
ಪ್ರಪ್ರಯತ್ನವಿಲ್ಲದಾವ ಕಜ್ಜಂ ಕೈಗೂಡದು
ಎನಲ್ಕಾ ಸಾಹಸಂ ಒಂದೇ ಸುಗಮದಾರಿ !
ದೈವ ನೇಮದಲಿ, ಜಯಶೀಲತೆಯ ನೇಮದಲಿ,
ರಾಷ್ಟ್ರೀಯ ನೇಮದಲಿ ಸರಕಾರೀ ಯಂತ್ರಮಂ
ಜ್ಞಾನನೇತ್ರರ್ ಬೊಗ್ಗು ಬಡಿಯುವುದೆ ದಿಟ್ಟತನಂ !

—o—

ಸ್ವರ್ಗಾಧಿಪತಿಗಳ ಸಭೆ

ಸ್ವರ್ಗಾಧಿಪತಿಗಳ ಸಭೆ ನಡೆದಿದೆ
ಲೋಕ ಪರಿಸ್ಥಿತಿಯ ಪರಿಶೀಲಿಸೆ !

ಸಡಗರಿಸಿ ವೇದಘೋಷಗಳೊಡನೆ
ಸ್ವಾಗತಿಸಿ ಸತ್ಕರಿಸೈ ನೇಹಿಗನೆ !

ಬಂದಿಹರು ಬಂದಿಹರು ತಂಡದಲಿ
ರಾಷ್ಟ್ರೀಯ ಭಾವೈಕ್ಯದ ಮಾನಸ

ವಿಹಾರದಲಿ ಕರ್ತವ್ಯ ಪ್ರಜ್ಞೆಯಂ
ಧರ್ಮನಿಷ್ಠೆಯಂ ಮೇಣ್ ಅದ್ಭುತ

ಸಮಯನಿಷ್ಠೆಯಂ ಮೇಣ್ ಜೀವನ
ನಿಷ್ಠೆಯಂ ಅಳೆದು ನೋಳ್ಪ ತೆರದಲಿ

—o—

ತರುಶಿವ

ನದನದಿಗಳಿಂದೆ ಶೋಭಿಪ ಭುವಿಯಲಿ
ಗಿಡುತರುಗಳೆ ವರ ದಿವಿಜರಿರೆ
ಅವುಗಳ ಮಾನಿಪುದು ಸ್ವಲಾಭದಿಂದೆ
ಎನಲ್ಕೆ ಎಲ್ಲಿಯು ನಿಜ ಪ್ರೀತಿ....?

ತರುಶಿವ ಸಂಬಾಳಿಪ ಜನಮು
ಆಕರಿಪುದು ಸೆಲೆ ಫಲ–ಪುಷ್ಪ
ಕಾಂಡಗಳಲ್ಲದೆ ಗಿಡುತರುಗಳಲ್ಲ
ಎನಲ್ಕೆ ಎಲ್ಲಿಯು ನಿಜ ಪ್ರೀತಿ.....?

ಬಯಲಲಿ ಮೇಯುವ ತುರುಗಳು ನೋಳ್ಪುದು
ನೆಲದ ನೆರಳನ್ನೆ.   ತರುವಿನಲಿ
ಇರ್ಪುದೇಂ ಕಿಂಚಿತ್ ಶ್ರದ್ಧಾಗೌರವ ?
ಎನಲ್ಕೆ ಎಲ್ಲಿಯು ನಿಜ ಪ್ರೀತಿ....?

ಮರವನು ಕೊಯ್ದು ಹಲಗೆಯಂ ಮಾಡುವ
ಬಡಗಿಗೆ ಮರಗಳ ಕೊಯ್ವುದಲ್ಲದೆ
ಇರುವುದೆ ಮರಗಳ ಬೆಳೆಸುವ ಹುಮ್ಮಸ್ಸು ?
ಎನಲ್ಕೆ ಎಲ್ಲಿಯು ನಿಜ ಪ್ರೀತಿ....?

ಬುದ್ಧಿರಹಿತ ಜನಜಂಗುಳಿಯು ಮನಂ
ಅರ್ಥೈಸದು ಗಿಡಮರಗಳ ಸೆಲೆ–
ಬೆಲೆಯಂ ಕಡಿಕಡಿದು ಒಲೆಗಿಡುವರ್
ಎನಲ್ಕೆ ಎಲ್ಲಿಯು ನಿಜ ಪ್ರೀತಿ....?

ಬೌದ್ಧಿಕ ರಸವುತಿ ಮುಂದಿನ ಜೀವನ
ಪರಮಾರ್ಥವರಿಯದೆ ದಿನದಿನ
ಪ್ರತೋಭನೆಯಿಂದೆ ಕಡಿವುದೈ ಕಾಡು
ಎನಲ್ಕೆ ಎಲ್ಲಿಯು ನಿಜ ಪ್ರೀತಿ....?

ನಾನೆನೆವೆನನುದಿನ ಹಸುರಿನ ವನವ
ಶಿವನನು ಭಾವಿಸುವ ತೆರದೊಲ್
ಕಣ್ತುಂಬ ನೋಡಿ ಗೌರವ ಭಾವ ತುಂಬಿ
ಎನಲ್ಕೆ ತಿಳಿ ಕವಿಮನ ಪ್ರೀತಿ....!

—o—

ರಣಭೂಮಿ

ಮರೆ ಕಳೆದ ದಿನಗಳಂ, ನೆನೆ ಬರುವ ಕಾಲವುಂ
ನೆನೆ ಈಗಣ ಚಣಚಣಗಳ ಧೈರ್ಯದಿ
ಸನ್ನಿಯಲಿ ಇಡು ನಂಬುಗೆ. ಛಲದಲಿ ಅರಿಜನರ
ಕಣದಲಿ ಕಡಿದು ಗಳಿಸು ಸ್ವಾತಂತ್ರ್ಯವಂ !

ಎಲೆವೀರ ! ಬೆದರದಿರು ರಣರಂಗದಲಿ ನೀನು
ಬಲವಂದು ನಡೆ ಮುಂದೆ ಕಲಿತನದಲಿ
ಹೇಡಿಯಲ್ಲ ನೀನು ವರಶೂರತನದಿಂದಲಿ
ಬಲಿತ ಭುಜ ಆಸ್ಫಾಲನೆಗೈದು ನಡೆಯೈ !

—o—

ದಂಗೆಯೋಳಿ !

ಎಣೆಯಿಲ್ಲದ ಸ್ವಾತಂತ್ರ್ಯ ಸಮರದಲಿ ಪ್ರಾಣವ
ಪಣವಿತ್ತು ಹೋರಾಡಿ ಕೆನ್ನೀರಿನ ಓಕುಳಿ
ಚೆಲ್ಲಾಡಿ ಕ್ರಿಮಿಕೀಟಗಳವೋಲ್ ಚಟಪಟನೆ
ಸಿಡಿದು ಅಸುವಂ ತೆತ್ತು ಕಡುಗೋಳಿನಿಂ ಅತೀವ
ಸಂಕಷ್ಟ ಸಂಕಟಗಳಿಂ ಗಳಿಸಿದ ರಾಷ್ಟ್ರದ
ಸ್ವಾತಂತ್ರ್ಯ ಸಾಮಾನ್ಯವಲ್ತು! ಲೋಕಕೆ ಮಾದರಿ-
ಯಪ್ಪ ಶಾಂತಿ ಮಾರ್ಗದ ಯುದ್ಧ! ಎನಿತೆನಿತು ವರ
ಬಂಧುಗಳ್, ನಿರಪರಾಧೀ ಮಾನಿಸರ್ ಮುಗ್ಧ
ಮಕ್ಕಳ್, ಸುದತಿಯರ್ ಕಲಿತ ಸೌಧಾಮಿನಿಯರ್
ವಿದೇಶೀ ಪರಮ ಬಂಧು ಶ್ರೀಷ್ಮರ್ ಮುಂತಪ್ಪ
ಕೋಟ್ಯಾಂತರ ಜನರ್ ದಂಗೆಯೆದ್ದು ಅನನ್ಯ ಧರ್ಮ
ಕರ್ಮ ಸತ್ಯಗಳಿಂ ಪಗಲಿರುಳೆನ್ನದೆ ವ್ರತ
ನಿಷ್ಠೆಯಿಂ ನಿರಾಯುಧೀ ಧ್ಯೇಯದಿಂ ಶಾಂತಿಯಿಂ
ಗಳಿಸಿದ ಪರಮ ಸಾಸದ ಸ್ವಾತಂತ್ರ್ಯಮಿಂದಿನ
ಹೀನಾತಿಹೀನ ಜನರ ಹಣದಾಹಕೆ ಮೋಹ್
ಕುಕರ್ಮದ ಕಾರ್ಯಾಗಾರಕೆ ಆಗರಮೆನೆ ಏಂ
ನಾಣ್ಗೇಡು! ಏಂ ಧರ್ಮಗೇಡು! ಏಂ ನೀತಿಗೇಡು!
ಹಾ! ಎರ್ದೆಯೆನ್ನ ಬಿರಿದು ಹೋಹುದೈ ಚಣಕಾಲ
ಹರಿಸಿದೊಡೆ ಈ ಲೌಕಿಕರ ಜಂಝಡದತ್ತಣಂ!
ಇನ್ನಾದೊಡಂ ಬುದ್ಧಿಮಾನ್ಯ ಹಿತಚಿಂತಕರ್
ಅಧಿಕಾರ ಸ್ಥಾನಿಕರ್ ಸಮಾಜ ಸುಧಾರಕರ್
ಮಠಾಧಿಪತಿಗಳ್ ಗುರುಹಿರಿಯರ್ ಮತ್ತಮಾ
ಪ್ರಜ್ಞಾವಂತ ಯುವಜನರ್ ಕಣ್ತೆರೆದು ನೋಡಿರೈ! →

ಏನಿದೇನು ನಾಗರಿಕ ಮಾನವ ಸಮಾಜವೆ ?
ಅಂತಲ್ಲದೆ ಧೂರ್ತದಾನವರ ರಾಜ್ಯವೆ ?
ಯೋಚಿಸಿರ್ಪೈ ಆಪನಿತು ಮನಕೊರೆದು ಯೋಚಿಸಿರ್ಪೈ !
ಸ್ವಾಮಿಾ ! ಇಂತಾಳಲಕ್ಕುಮೆ ಈ ಪರಿಯ ತಾಪಂ ?
ಆಂ ಕೈಮುಗಿದು ಬೆಸಗೊಳ್ಳುವೆ ದಂಗೆಯೇಳಿ !
ಭ್ರಷ್ಟಾಚಾರದ ವಿರುದ್ಧ, ವರದಕ್ಷಿಣೆಯು ವಿರುದ್ಧ,
ಅನಾಚಾರದ ವಿರುದ್ಧ, ಮತಿ ಮೌಢ್ಯದ ವಿರುದ್ಧ,
ಪೆಣ್ಗೊಲೆಯು ವಿರುದ್ಧ, ಮತಿಗೆಟ್ಟ ಹೊಲಬುತನದ
ವಿರುದ್ಧ, ರಕ್ತದಾಹದ ವಿರುದ್ಧ, ಕುಜನ ಕುಮತಿಯು
ವಿರುದ್ಧ, ಹಣಗಳ್ಳರ ವಿರುದ್ಧ, ದಲಿತರಲಿ ಅನು-
ಕಂಪೆಯಿನಿತಿಲ್ಲದೆ ಅರೆದು ಹಿಂಡಿ ಹೀರುವರ
ವಿರುದ್ಧ, ಕಡುದಾರಿದ್ರ್ಯದ ಕರಾಳ ಹಸ್ತದ
ವಿರುದ್ಧ, ವೈಗಳ್ಳತನದ ವಿರುದ್ಧ, ಕೊಳೆಮನದ
ಕೊಳಕು ಕೊಳಚೆಯು ವಿರುದ್ಧ, ಅನಕ್ಷರತೆಯು ವಿರುದ್ಧ,
ಅನಾಗರಿಕತೆಯು ವಿರುದ್ಧ, ಅಶ್ಲೀಲತೆಯ ಮೇಣ್
ಕುಸಂಸ್ಕೃತಿಯು ವಿರುದ್ಧ ಮತಿವಂತರ್ ಬುದ್ಧಿ
ಮಾನ್ಯರ್ ದಂಗೆಯೇಳಿ ! ಜೋರಿನಿಂ ಸಿಡಿದೇಳಿ !
ಓ ಕುಲ ಬಾಂಧವರೆ ಇಂದೇ ಈಕ್ಷಣ ದಂಗೆಯೇಳಿ !
ಸಂಕೆ ಇನಿತಿಲ್ಲದೆ ದಯೆದಾಕ್ಷಿಣ್ಯವಿಲ್ಲದೆ
ದಂಗೆಯೇಳಿ ! ದಂಗೆಯೇಳಿ ! ದಂಗೆಯೇಳಿ !
ಗುರಿಮುಟ್ಟುವತನಕ ಬಿಡದೆ ದಂಗೆಯೇಳಿ !

—o—

ಜನನಿಗೆ

ಸಗ್ಗ ಸಿರಿಗೆ ಜಗವುರಿತ ಜನನಿ, ನೀನೆಲ್ಲಿರುವೆ?
ಅಂಗಳದಿ ಅರೆಬಿರಿದ ಮಂದಾರ
ಪುಷ್ಪವ ಬಯಸಿ ಪುಷ್ಪ ಕರಂಡವ ಮನೆಮಾಡಿ
ನೆಲೆ ನಿಂದೆಯಾ ನಿತ್ಯ ನಿನ್ನವರ
ಕಣ್ತುಂಬ ಕಾಣಲೆಂದು, ಕಂಡು ಹರುಷದಿಂದೆ
ಉಸಿರಾಡಲೆಂದು ಎಲೆ, ಎನ್ನಯ ಸಿರಿ ಜನನಿಯೆ !

ಸಭಾಂಗಣದಿ ತೇಲುವ ಬೆಳ್ಮುಗಿಲ ಮಾಲೆಯಲಿ
ನೆಲೆನಿಂದು ಭವದೀಯ ಬಂಧನವ
ನೀನವಧರಿಸುವೆಯಾ, ಎನ್ನಯ ಕಡು ಸಂಕಟ
ಸಂಕಷ್ಟಗಳ ನೆನೆದು ಮರುಮರುಗಿ,
ಇಹಲೋಕ ಪರಲೋಕಗಳ ನಡುವಿನಂತರದಿ
ಎಲ್ಲೆಲ್ಲಿ ಅಲೆಯುತಿಹೆ ಎನ್ನ ಮುದ್ದು ಜನನಿಯೆ !

ಗಿರಿಕಂದಕದಿಂ ಭೋರನೆ ಧುಮ್ಮಿ ಇಳಿತರ್ಪ
ತಿಳಿನೀರ ಧಾರೆಯಲಿ ನೀ ನಿಂದು
ಮೀನಾಗಿ ಸುಳಿದಾಡಿ ಕಣ್ತುಂಬ ಕಾಂಬೆಯಾ
ಎನ್ನಯ ಭವಬನ್ನವ ಜನನಿಯೇ
ಈ ರುದ್ರ ಕೋಟೆ ಅಳಿಯದು ನಾನಳಿವ ಮುನ್ನ
ನಾನಳಿಯೆ ಅಳಿವುದೆಲ್ಲಕೆ ಕಿಚ್ಚಿಟ್ಟು ತಾಯೇ !

ಭ್ರಮರಂಗಳ್ ಝೇಂಕರಿಪ ಪೂಬನದೊಳಾಡುತೆ
ಭ್ರಮರರಾಗಕೆ ಮಾರುಪೋದೆಯಾ ?
ಭವಭಂಗವ ಬದಿಗೊತ್ತಿ ಭ್ರಮಂತಗೋಷ್ಠಿಯಂ
ಬೆಂಬಿಡಿದೆ ಹೇ ಮಮ ಪ್ರಿಯ ಜನನಿಯೆ !
ಅನಿಲ್ಲಿ ನರಳುತಿಹೆ ಪರಿಪರಿಯಲಿ ಬೀಳಿನ
ಬಾಳಿನಲಿ ಕೊನೆಗಾಣದ ಗೋಳಿನ ಕಣಜದಲಿ.

ಸಂಪಿಗೆಯ ಮರದ ಸೊಂಪಿನಲಿ ಅರಳಿದ ಪೂವು
ನಗುತಿರೆ ಅರೆ ಬಿರಿದು ನರುಗಂಪನು
ಬೀರಿ ನೀ ಮಾರುಪೋದೆಯಾ ಎನ್ನ ಜನನಿಯೆ ?
ಮನನೊಂದು ನೋಯುತಿರೆ ಭವದಿಂ
ದೂರಾಗೆ ಸಂಪಗೆ ದ್ರುಮವನೇರಿ ತಳಿರ್ಗುಡಿ
ಪಚ್ಚೆ ಪೀಠದಿ ಒಪ್ಪಗೊಳಲುಳಿದೆಯಾ ದೇವಿ !

ಬ್ರಹ್ಮಗಿರಿಯ ಉನ್ನತಶಿಖರಮಂ ತಾನೇರಿ
ಘನಿಸುತಿರೆ ಚಣಚಣ ರಸವೃಷ್ಟಿ
ಬ್ರಹ್ಮಗಿರಿಯ ಸೋಪಾನವಪಿಡಿದು ನಲ್ಮೆಯಿಂ
ಜಿಗಿದೆಯೇಂ ಸಗ್ಗ ಸಿರಿಗೆ ತಾನೇ
ತಾನಾಗಿ ಸಲ್ವಪೊಲ್ ! ಹಾ, ಮರೆತೆ ನೀನೆನ್ನ !
ಅನೆಂತು ಮರೆವೆಂ ಮನ ಮೋಹನ ತಾಯೆ !

→

ಹೇ, ಜನನಿ ! ನಿನ್ನ ಕಾಂಚೆನ್ನೈ ತರುಲತೆಗಳ್
ನೊಂದೆದೆಯ ಅಳಲಂ ಸೋವವೊಲ್.
ದಿನದಿನಂ ನಿನ್ನಂ ತರುಲತೆಯಲ್ಲದಾರೇಂ
ಸಂತೈಸಬಲ್ಲರ್ ಮಮ ಜನನಿಯೆ !
ನಿನ್ನ ಕಾಂಚೆ ಪುಣ್ಯ ಜಲರಾಶಿಯಲಿ ನಿತ್ಯವು
ಶ್ರೀ ಜಲನಿಧಿ ನಿನ್ನಂ ಸಂತೈಸುವ ಮಾಳ್ಕೆಯಲಿ !

ಕೇಳ್ ! ಜನನಿ ನಿನ್ನಂ ಬೇರಾರ್ ಅರಿಯುವರ್
ಕಂಡು ಕೇಳ್ದವರಲ್ಲದೆ, ಇಂದಾಂ
ನೋಡುವೆನ್ನೆನಯ ಅಂತಃಚಕ್ಷುವಿಂದೆ ನಿನ್ನಯ
ಪರೋಕ್ಷದಿರವಂ. ನೋಳ್ಪೆನೆನ್ನಯ
ಸಂಕಷ್ಟದಲಿ ಕವಿತೆಯಲಿ ಕಾವ್ಯದಲಿ ಮೇಣ್
ಸೇವೆಯಲಿ ಮತ್ತಾ ಜಯಾಪಜಯದಲಿ ತಾಯೆ !

ದಶದಶಮಾನಗಳ ಹಿಂದೆ ಅಗಲಿ ಹೋದೆ
ಸಂಸಾರ ಬಂಧನವ ನೀ ಹರಿದು.
ಆನಂದು ಹರಿಸಿದಾ ಕಂಬನಿಯ ಕಾಲುವೆಯು
ಶಾಂತಿಯನು ಕೊಚ್ಚಿ ಕೊಂಡೊಯ್ದಿಹುದು
ಶಾಂತಿಯಿರದ ಪಾತ್ರದಲಿ ನಾನಿಲ್ಲಲಾರೆ
ನೋಯಲಾರೆ ಈ ವಿಶ್ವವೆಲ್ಲ ಬರಿಯ ಮಾಯೆ !

→

ಆನು ತಾನೆಂಬುದು ಬರಿಯ ಮಿಥ್ಯೆ ಬದುಕಿನಲಿ
ಮೊಗೆಮೊಗೆದು ಸಂಗ್ರಹಿಸುವಾಸೆಯುಲಿ

ಬಾಳುವ್ಯರ್ಥ, ಕಾಲವ್ಯರ್ಥ, ಬುದ್ಧಿಯು ವ್ಯರ್ಥವೈ
ಮಕ್ಕಳು ಮರಿಗಳ ಲಾಲನೆಯಿಂದೆ !

ಮಕ್ಕಳಿಗಾಗಿ ನೀನೇಕೆ ದುಡಿದು ಸಂಗ್ರಹ
ಕಾರ್ಯದಿ ಸವೆಸಿದೆಯೊ ಅಮೂಲ್ಯ ದಿನವ ತಾಯೆ !

ವ್ಯರ್ಥಕಾಲನದಿ ಹರಿದು ಹೋದುದು ಕೈಗೆಟುಕದೆ
ಬರಿದೆ ಬೆಂದು ನೊಂದು ಕಳೆದೆನೆನ್ನ

ಜೀವಮಾನಂ ಹೇಳ ಹೆಸರಿಲ್ಲದೊಲು ತಾಯೆ ;
ಆನೆನೆನೆನೆವೆ ನಿನ್ನ ದಿನದಿನಂ

ವ್ಯರ್ಥವಾಗದೊಲೆನ್ನ ಜೀವನ ನದಿ ಅನುದಿನ
ನೀ ಮುನ್ನಡೆಸೌ ನೇರ ದಾರಿಯುಲಿ ಹೇ ಜನನಿ !

—o—

ಶ್ರೀ ಗುರುವೆ

ಶ್ರೀ ಗುರುವೇ, ತವ ಹೃದಯ ವಿಶಾಲತೆ
ಅರಿತಿಹರೇಂ ನಿನ್ನನುಯಾಯಿ
ಶಿಷ್ಯಗಣಂ ? ಎಲ್ಲೆಲ್ಲಿಯುಂ ಬ್ರಹ್ಮವ
ಕಾಣುತ ಪೂಜಿಸಿ ಅರ್ಚಿಸಿದೆ
ವರ್ಗಭೇದವ ತೊಡೆದು ಧರ್ಮಕರ್ಮ
ಮೋಣಧ್ಯಾತ್ಮ ಭೋಗವ ಪರಿ
ಬೋಧಿಸಿ ಇಳೆಗೆ ಮಾರ್ಗದರ್ಶಿಯಾದೆ

—o—

ಗಡಿ ಸಮಸ್ಯೆ

ಭಾರತವರ್ಷ! ಓ! ಭಾರತವರ್ಷ!
ಎಂತಹ ಪುಣ್ಯಭೂಮಿ ಭಾರತವರ್ಷ!
ವೇದವೇದಾಂತದ ಪರಿಮಳವ ಪಸರಿಸುತ
ಏಗಳುಂ ಸುಜ್ಞಾನಿಗಳಂ
ಆಕರ್ಷಿಸುವ ಸತ್ಯಸುಂದರ ಸಂಸ್ಕೃತಿಯುಳ್ಳ
ಮನೋರಮಾ ಭಾರತವರ್ಷ!
ಅನೇಕ ರಾಜ್ಯಗಳಂ, ಅನೇಕ ಭಾಷೆಗಳಂ
ಅನೇಕ ಧರ್ಮಗಳಂ
ಅನೇಕ ವರ್ಗಾನುವರ್ಗದ ಸಮಸ್ಯೆಗಳಂ
ಪೊಂದಿದ ಬೃಹದ್ ರಾಷ್ಟ್ರ ಭಾರತ ವರ್ಷ!
ಭಾಷಾಗೊಂದಲ–ಜಾತಿಗೊಂದಲ
ದೇಶದ ಗಡಿಗಡಿಗಳ ಅತೀವ ಗೊಂದಲ–ಗೊಂದಲ!
ಆನ್‌ತಾನೆಂಬ ರೋಷದುಸಿರಿನ ಆರ್ಭಟ–
ಗೋಳಾಟ–ಕಡಿದಾಟ–ಕೊಲೆ–ಸುಲಿಗೆ–ಮೋಸ
ಇತ್ಯಾದಿಗಳನ್ನೊಳಗೊಂಡ ಧೂರ್ತ ಜನಕೋಟಿಗೂ
ಕೊರವಿಲ್ಲ....ಕೊರವಿಲ್ಲ!
ಇದೆಲ್ಲಂ ಕಲಿಯದವರ–ಅಜ್ಞಾನಿಗಳ
ಕುಕರ್ಮ ಎಂದು ಭಾವಿಸದಿರ್
ಸಮಸ್ತ ಜನನಿಧಿಯ ಚಿಂತಿತ ಮನವೇ!
ದಿನನಿತ್ಯಂ ಒಂದಲ್ಲ ಒಂದು
ಗೊಂದಲವೆಬ್ಬಿಸಿ ಗದ್ದಲ ಹೂಡುವುದು
ಕಲಿತವರ ಗಂಭೀರ ಮೋಜಿನ ಮೋಜು!
ಪಾಶ್ಚಾತ್ಯ ಪ್ರಪಂಚಾಮುಳೆ

ಜ್ಞಾನವಿಜ್ಞಾನಗಳ ಹುಮ್ಮು ಶೋಧನೆ–ಪರಿಶೋಧನೆಗಳ
ಆಗರವಾಗಿ ಲೋಕ ಪ್ರಸಿದ್ಧವಾಗಿರೆ
ಇದೇನೀ ಪುಣ್ಯಭೂಮಿಯಲಿ
ರೋಷ–ದ್ವೇಷ–ಜಗಳಗಂಟತನ ಮುಂತಪ್ಪ
ದುರ್ಗುಣಗಳ ವಿಶೇಷ ವೈಶಿಷ್ಟ್ಯಂ ?
ಇದಾರ ಉದ್ಧಾರಕೆ ? ಇದಾವ ಜೀವನ
ಪರಿಪುಷ್ಟಿಗೆ ?
ನೆರೆ ಪ್ರಾಂತ್ಯದೊಡಂ ಸಹ ಜೀವನದ
ಆನಂದಮೋದವ ಓಸರಿಸಿ
ಕಾಲ್ಕೆರೆದು ಜಗಳಕಿಳಿವರೇಂ ನಿತ್ಯ
ಭಾಷಾಗೊಂದಲ ಹೂಡಿ ?
ಈ ನೆಲ ನಮ್ಮದು ತಮ್ಮದೆನುತೆ ನೆರೆಹೊರೆ
ದೇಶಿಗರ್–ಕಲಿತ ಸುಜ್ಞಾನಿಗಳ್
ಬಡಿದಾಡಿದರೆ ಭಾರತವರ್ಷದ ಕೀರ್ತಿ ಕಳಸ
ಕಳಚಿ ಬಿದ್ದು ಹುಡಿಯಾಗದೇಂ ?
ಛಿಃ! ನಾಚಿಗೆ ಗೇಡು ! ಮಾನಗೇಡು !
ಪೇಸು ಜೀವನೀ ದುಮ್ಮಾನದ ಹುರುಳು
ಸ್ವಾರ್ಥ....ಸ್ವಾರ್ಥ....ಸ್ವಾರ್ಥ !
ಕಡು ಸ್ವಾರ್ಥವಲ್ಲದೆ ಮತ್ತೇನಲ್ಲಂ.
ಸ್ವಾರ್ಥವ ಕಳೆದು ಸಾರ್ಥಕತೆಯ
ನಲ್ ಬದುಕಿನ ಹಾದಿಯಂ ಹಿಡಿಯುವೊಡೆ
ಏಸೊಂದು ದಶಕಗಳುರುಳಿದುವು ಸರಿದಾರಿ ಕಾಣದೆ.
ಈ ಸಮಸ್ಯೆಯಂ ಬಗೆಹರಿಸಿಕೊಳ್ಳೆ
ಗಡಿ ಜನರ ಮತಾಭಿಪ್ರಾಯಮಂ
ಪಡೆವುದೊಳ್ಳಿತೈ ಮಮ ಬಂಧು !

ಗಡಿಯ ನಕ್ಷೆಯುಳ್ಳ ಮತ ಚೀಟಿಗಳಂ
ಹಂಚಿ, ಪ್ರಚುರ ಪಡಿಸಿ
ನಿರಿಕ್ಷರಿಗಳಲಿ ಗಡಿ ಪ್ರಜ್ಞೆಯಂ ಮೂಡಿಸಿ
ಕಟ್ಟಂಕೆಯ ಜನಾಭಿಪ್ರಾಯವಂ
ಚುನಾವಣಾ ವೈಖರಿಯೊಳ್ ಪಡೆದುಕೊಳ್ಳೆ
ಭಂಗವೇನಿಲ್ಲೈ.
ಮತಗಣಿಕೆಯನಂತರಂ
ಬಹು ಜನಾಭಿಪ್ರಾಯವೆ ಸಿಂಧು !
ಗಡಿ ಸಮಸ್ಯೆಯ ಅಂತಿಮ ನಿರ್ಣಯಕೆ
ಸುಲಭ ಮಾರ್ಗಮಿದುಂ
ಸುಜ್ಞಾನ ಮನವೇ ಪರಿಭಾವಿಸಿ ನೋಡು !
ಇಂ ಭಾಷಗೊಂದಲವೇಕೆ ಶಾಲೆಗಳಲಿ ?
ಕಡ್ಡಾಯವಂ ಕೈಬಿಟ್ಟು
ಅವರವರ ಇಚ್ಛಾಪ್ರವೃತ್ತಿಗೆ ಬಿಡಿ.
ಕನ್ನಡಿಗರಿಗೆ ಕನ್ನಡ ಕಸ್ತೂರಿಯೇ
ಇರಲಿ........ಇರಲಿ.
ಮರಾಠಿಗರಿಗೆ ಮರಾಠಿ ಮಂದಾರವೇ
ಇರಲಿ........ಇರಲಿ
ಕಟ್ಟೊತ್ತಾಯದ ಕಲಿಕೆಯಿಂದೆ
ಮಕ್ಕಳ ಮಿದು ಮನ ನೋಯದಿರಲಿ.
ಭಾರತ ವರ್ಷದ ಕೀರ್ತಿ ಕಳಸವಂ
ಕಳಚದೆ, ಬಹುಮತಾಭಿಪ್ರಾಯಕೆ ಮುನ್ನಣೆ ನೀಡಿ.
ಗೌರವದಿಂ, ಜಾನದಿಂ, ನೇಮದಿಂ
ಸಮಸ್ಯೆಗಳಂ ಪರಿಹರಿಸಿರೈ ಪರಮ ಬಂಧುಗಳೇ !
ಜೈ ಭಾರತವರ್ಷ ! ಜೈ ! ಭಾರತೀಯ !

—o—

ನೀರೋ ಚಕ್ರವರ್ತಿ

ರ್ಕ ಸಾವಿರದೊಂಭೈನೂರಹತ್ತನೆ ವರ್ಷದಲಿ
ಭೋಂಕನೆ ಸಂಭವಿಸಿತೊಂದು ಅಪೂರ್ವ ಬೃಹತ್ತಮ
ಗ್ರಹ ಥಳಥಳಿಸುತ ಮಿಸುನಿ ಕಾಂತಿಯು ಮಿರಾರಿಸುವ
ಮಾಳ್ಕೆಯೊಳ್ ಕಿಕ್ಕಿರಿದರಿಲ್ ಚುಕ್ಕಿಚುಕ್ಕಿಗಳ
ಮಹಾ ಸಂಗರದ ಮಧ್ಯೆ ಚಂದ್ರ ಸುಶೋಭೀ ಖೇ
ಮಂಡಲದಲಿ! ಆಗಳ್ ಏನೆಂಬೆನೊ ಲೋಕದ
ಲೋಗರೊಳ್ ಮೂಡಿದ ಗಲಿಬಿಲಿಯು! ಮನಮೌಢ್ಯಂ
ಘನಿಸಿ ಆವಾವ ಆಪತ್ತು ಬಂದಪುದೊ ಏಂ
ಸಂಕಷ್ಟನೊ ಎಂದೆಂಬ ದುಶ್ಯಂಕೆಯ ಡಾಕಿನಿ
ಕಾಡಿದುದು ಎಡೆಬಿಡದೆ. ಮನದ ಕಳವಳದಿಂದೆ
ಆವ ಕತದಿಂ ಮೂಡಿದುದೊ ಎಂದು ಶಪಿಸುತಲಿ
ನಿಶಿಯೊಳದರ ವಿಷಗಾಳಿಯು ತಮಗೆ ಸೋಂಕದಿರೆ
ಗವಾಕ್ಷಿಗಳಂ ಮುಚ್ಚಿ ತಡೆಯಿಕ್ಕಿದರ್ ಭೀತಿ
ಕಾವಳಿಸಿ. ಧರ್ಮಗುರುಗಳ್ ಶಾಸ್ತ್ರವನಾರೈದು
ಧೂಮಕೇತುವಿನವತರಣಂ ಒಳ್ಳಿತಲ್ತು ಜಗಕೆ.
ಚಕ್ರಾಧಿಪತ್ಯ ಉರುಳುರುಳಿ ಚಕ್ರವರ್ತಿಗಳ್
ಪದಚ್ಯುತರಪ್ಪುದು ದಿಟವೆಂದು ಕಣಿ ನುಡಿದರ್!
ಆಗಳಾ ರೋಂ ರಾಜ್ಯದ ಚಕ್ರವರ್ತಿ ತನ್ನೊಳ್
ನಡುನಡುಗಿ ಕಂಗೆಟ್ಟು ಜಾನಗೇಡಾಗಿ ಕಡು
ಚಿಂತೆಯಿಂ ಯೋಚಿಸಿ ಮನದೆ ತನ್ನಯ ರಾಜ್ಯದ
ಬುದ್ಧಿಜೀವಿಗಳಿಂದ ಮಾತ್ರಮೇ ಎನಗಕ್ಕು
ಪದಚ್ಯುತಿಯೆಂದು ಬಗೆದು ಮತಿಗೆಟ್ಟು ಸೈನಿಕ
ಬಲವನಟ್ಟಿ ನಿಷ್ಕರುಣೆಯಿಂ ನಿರ್ದಯೆಯಿಂ →

ನಿರ್ದಾಕ್ಷಿಣ್ಯದಿಂ ಕೊಲ್ಲಿಸಿದಂ ಅಖಿಲ ಬುದ್ಧಿ
ಜೀವಿಗಳಂ! ಮೇಣ್ ಕಾಡಿಗಟ್ಟಿಸಿದಂ ಅವರ
ಕುಟುಂಬಿಗರಂ! ಇಂತಪ್ಪ ಹುಚ್ಚಪ್ಪಗಳ
ಮತಿಮೌಢ್ಯಮಂ ದುರ್ವ್ಯವಹಾರಮಂ ಕಣ್ತುಂಬ
ಕಾಣುತಂ ನಭೋ ಭಿತ್ತಿಯಲಿರ್ದ ಬೃಹತ್ತಮ
ಧೂಮಕೇತು ಮಿಸುನಿ ನಗೆಯ ಬೀರಿತ್ತು ತನ್ನೊಳ್!

ಈಗಳುಂ ಕರ್ಣಾಕರ್ಣಿಯಾಗುಳಿದಾ ವಾರ್ತೆ
ನೀರೋ ಚಕ್ರವರ್ತಿ ಇಡೀ ರೋಂ ನಗರ ಅಗ್ನಿ
ಜ್ವಾಲೆಯಲಿ ಉರಿಯುತಿರಲ್ ಅರಮನೆಯಲಿ ಪಿಟೀಲ್
ಬಾಜಿಸುತಿರ್ದನೆಂಬುದು ಮನೆಮಾತು! ಕಿಡಿಮಾತು!

—o—

ಕನ್ನಡ

ಕನ್ನಡ ಭಾಷೆ ಕಸ್ತೂರಿಯೊಲ್
ನಿತ್ಯ ಪರಿಮಳ ಸುಂದರ
ಕನ್ನಡ ದೇಶ ಧತ್ತೂರಿಯೊಲ್
ಸತ್ಯ ಪ್ರೇಮದ ಬಂಧುರ
ಕನ್ನಡ ಕವಿ ಕಾವ್ಯ ಮಧುರ

—o—

ಆವ ಹಾದಿಯೊಳು ನೀ ಬರುವೆ ?

ಕಾದಿರುವೆ ನಾನನುದಿನ ನಿನಗಾಗಿ
ನಿನ್ನ ದಿವ್ಯ ದರ್ಶನ ಪಡೆಯಲೆಂದು
ಆವ ಹಾದಿಯೊಳು ನೀಬರುವೆ ಹರಿಯೆ
ಅರಿತು ಪೇಳಯ್ಯ ಶ್ರೀ ಪರಮಾತ್ಮನೆ

ಮುಂಬಾಗಿಲನು ತೆರೆದು ಚೆಂದದಿಂ
ಹಾಲು ತುಪ್ಪಗಳೊಂದಿಗೆ ನಾನಿಂದು
ಕಾದಿಹೆ ತವ ಚರಣ ಪಥದಿ ಕಣ್ಣಿಟ್ಟು
ಒಲಿದು ಬಾರಯ್ಯ ಶ್ರೀ ಪರಮಾತ್ಮನೆ

ಮುಂಸ್ಸಂಜೆ ಕವಿದು ಪೊನ್ನ ರಾಗದಲಿ
ಮಿಂದಿತು ಜಗಮಂಡಲ ಶಾಂತಿಗಾಗಿ
ಪಡುವಣದ ಪಥವಿಡಿದ ಪೊನ್ನೇಸರು
ನಲಿದು ಬಾರಯ್ಯ ಶ್ರೀ ಪರಮಾತ್ಮನೆ

ಜನನಿ ಮುದದಿ ಕಂದನ ಕರೆವ ತೆರದಿ
ಕೂಗಿ ಕರೆವೆ ನಿನ್ನಂ ಅಕ್ಕರೆಯಲಿ
ಕಿವಿಗೊಟ್ಟು ಆಲೈಸಿ ಎನ್ನ ಮನವ
ಮುದಿಸೆ ಬಾರಯ್ಯ ಶ್ರೀ ಪರಮಾತ್ಮನೆ

—o—

ತಾಜ್ ಮಹಲ್

ಮಮತೆ ಎದೆಯಾಗರಂ, ಮನದಾಗರಂ ಮೇಣ್
ಪ್ರಾಣದಾಗರಂ. ಮಮತೆಯೆ ನರಜನುಮದುಸಿರ್,
ಮೇಣ್ ಸತ್ಯಧರ್ಮಗಳುಸಿರ್. ಮಮತೆಯಿಂದಲಿ
ಲೋಕ ಸ್ನೇಹ ಸಂಪತ್ತಿ. ಸುಜ್ಞಾನ ಸಂಪತ್ತಿ.
ದಯೆ–ಕರುಣೆ ವಿಶ್ವಾಸಗಳಾ ದಿವ್ಯಾಗ್ನಿಯುಂ
ಮಮತೆ ಮಧುರ ಮೈತ್ರಿ ದ್ಯೋತಕಂ!
ಓ ಅಂದು,
ದುರ್ವಿಧಿ ನಿಷ್ಕರುಣೆಯಿಂದೊಗೆದ ಕಾಲಪಾಶಂ
ಸಾಮಾನ್ಯವೆ? ಚಕ್ರವರ್ತಿ ಷಹಜಹಾನ್ ಹೃದಯ
ಸಂಪುಟಂ ಒರ್ಮೆಗೇ ಬಿರಿದು ಸೀಳಿಪೋಗುವ
ಮಾಳ್ಕೆಯಲಿ ಒದವಿತ್ತೈ ಮರಣ ರುದ್ರ ಸಂಕಟಂ!
ನಲ್ಮೆಯ ಮಡದಿ ಮಮತಾಜಳ ಕೊರಳ್ಗಿತ್ತ ಪಾಶ
ಬಿಗಿದು ಜೀವನ ಜ್ಯೋತಿ ಉಜ್ವಲೋಜ್ವಲಿಸುವ ಮುನ್ನ–
ಮೆಯೆ ನಂದಿ ಹೋಯಿತ್ತೈ ಬಿರುಗಾಳಿ ಬೀಸಿದೊಲ್!
ಅಶಾಶ್ವತಂ ಶಾಶ್ವತಗೊಳಿಪ ಮಹತ್ತರಂ
ಬೆಂಬಿಡಿದು ಬಂದಿರಲ್ ಎಂತು ಬಿಡುಗಡೆ ಪೇಳ್?
ಚಕ್ರವರ್ತಿಗೆ ಮಮತಾಜಳು ತನ್ನ ಚಕ್ರವರ್ತಿನಿ
ಮಾತ್ರಮೇಂ? ರಾಗಾನುರಾಗದತುಳೈಶ್ವರ್ಯ
ಭರಿತ ಶ್ರೀಮಂತಿನಿ, ಹೃದಯಬನದರಾಣಿ ಮೇಣ್
ಮನಃಕಲ್ಲೋಲ್ಲಾಸಿನಿ ಎನಲ್ಕೆ ಪೇಳಲೇಂ?
ಚಕ್ರವರ್ತಿಯುಂ ತೆಕ್ಕನೆ ಶೋಕರಸದಲದ್ದಿ,
ಅರಸೊತ್ತಿಗೆಯ ಹಂಸತೂಲಿಕಾ ತಲ್ಪದಲಿ
ಮೈವಿಟ್ಟು, ಅರೆಚಣದಿ ನಡೆದಳಾ ದಿಲ್ಲೀಶ್ವರಿ
ಸಗ್ಗಸಿರಿಯುಂ ಬಯಸಿ ನೇಪಥ್ಯಮಂ ಸಾರ್ದು!
→

ಚಕ್ರವರ್ತಿ ಷಹಜಹಾನ್ ಮುದ್ದಿನ ಮಡದಿಗಾಗಿ
ಅಳಲ್ದು ಬಳಲ್ದು ಕಡುದುಃಖದಿಂ ಗೋಳಾಡಿ
ನೊಂದು ನೋಯುತ, ಇನ್ನೆಬರಂ ಸುಖ ಸಂಪತ್ತು
ವೈಭೋಗಗಳಿಂ ಬಾಳ್ದ ಮಡದಿಯೆಂತು ಮಣ್ಣಿನ
ಗೋರಿಯಲಿ ಪವಡಿಸಿ ಚಿರ ನಿದ್ರಿಪಳೆಂದೆಂದು
ಬಗೆದು ತನ್ನೊಳ್ ಕರುಣೆಯಿಂ ಪ್ರೀತಿಯಿಂ ಮೇಣ್
ಅತುಲ ಶ್ರದ್ಧೆಯಿಂ ನಿರ್ಧರಿಸಿದಂ ಸುರಲೋಕ
ಸೌಂದರ್ಯವಂ ಮೀರಿಸುವ ಸುಂದರ ಮಹಲಂ
ಕಟ್ಟಿಸಲ್.

ಓವೊ! ಯಮುನಾ ನದೀ ತೀರದಲಿ
ಸುವಿಶಾಲೀ ಪುಣ್ಯಸ್ಥಲಿಯನಾರೈದು ಸುಘಳಿಗೆ
ಒದವಿದೊಡನೆ ಅಡಿಗಲ್ಲನಿಟ್ಟನಾ ಚಕ್ರವರ್ತಿ
ಷಹಜಹಾನ್ ತಾಜ್‌ಮಹಲ್ ನಿರ್ಮಾಣಕಾರ್ಯಕೆ!
ದಿನದಿನಂ ರಾಜ್ಯದಾ ಬೊಕ್ಕಸಂ ಬರಿದಾಗು-
ತಿರ್ದೊಡಂ ಲೆಕ್ಕಿಸದೆ ಧೃತಿಗೆಡದೆ ಹಣಸುರಿದು
ದೇಶದೇಶಗಳಿಂ ಸಕಲ ಸಾಮಗ್ರಿಗಳ್ ತರಿಸಿ
ಕರ್ಮಕುಶಲಿಗಳಂ ಮೇಣ್ ವಿದ್ವನ್ಮಣಿಗಳಂ
ಒಗ್ಗೂಡಿಸಿದಂ. ವರ್ಣವರ್ಣಾಂತ ವಿವಿಧತರ
ಹಾಲ್ಗಲ್ಲುಗಳ ರಾಶಿ ಬಂದು ಬಿಳ್ದುದು ದೇಶ
ವಿದೇಶಗಳಿಂ. ಸಾವಿರಾರು ಕರ್ಮಕುಶಲಿಗಳ್
ಒಗ್ಗೂಡಿ ಶ್ರಮನಿಷ್ಠೆಯಿಂ ಧರ್ಮನಿಷ್ಠೆಯಿಂ
ದುಡಿದರ್ ದಶಕದಶಕಗಳ್ ಉರುಳುವನ್ನ! ವರ್ಣ
ನಾತೀತ ತಾಜ್‌ಮಹಲ್ ನಿರ್ಮಾಣ ಮುಗಿವನ್ನ!

ಓ! ಏನಂಬೆ ಸ್ವರ್ಗೀಯ ಮಡದಿ ಮಮತಾಜಳ
ಪಾರ್ಥಿವ ಶರೀರ ಸಂಪತ್ತಿಗೆ ಚಿರ ಸೌಂದರ್ಯ →

ಶ್ರೀಯಿಂದೊಪ್ಪಿ ಮೆರೆವ ಮಹಾ ಸ್ಮಾರಕಮೆನಿಪ
ತಾಜ್‌ಮಹಲ್ ಅವ್ಯಕ್ತ ಸುರಲೋಕದ ಸುಂದರ
ಪ್ರತೀಕಮೆನೆ ಶಾಶ್ವತ ಬರ್ದಿಲಂ ಧರಣಿಯೊಳ್!

ಆಗ್ರಾನಗರಿಯಂಚಲ ಯಮುನಾ ನದಿಯ ವರ
ತೀರದಲಿ ನಲೆಗೊಂಡ ತಾಜ್‌ಮಹಲ್ ಜಗದೊಳ್
ಆವ ರಾಣಿಗಿಲ್ಲದ ಸ್ವರ್ಗತುಲ್ಯ ಸಂಪತ್ತಿ!
ಸುರಲೋಕದ ಸೌಂದರ್ಯವಂ ನಾಚಿಸುವವೊಲ್
ರಂಗುರಂಗಿನಿಂ ಪೊದಳ್ದ ಅಮೃತ ಮಹಲ್ ಮಿನ್ನೆ,
ಕ್ಷೀರಾಭಿಷೇಕಗೊಂಡುದೊ, ಮುಗಿಲ್ ಮಂಜಿನಲಿ
ಮಿಂದುದೊ, ಮೊಸರ ಕರಂಡವೊ, ಬೆಣ್ಣೆಯ ಮುದ್ದೆಯೊ
ಎನೆ ಪ್ರಪ್ರಥಮ ದೃಷ್ಟಿಯೊಳ್ ಮಂತ್ರ ಮುಗ್ಧಮಪ್ಪಿ
ಸುಖಮೂರ್ಛೆವೊಂದುವೊಲ್ ಸುರಮ್ಯ-ಭವ್ಯ ಕರಕುಶಲ
ಕಲೆಯವಾರಾಶಿ! ನೋಡಿ ಪೂರೈಸಲಾಗದಾ
ಸತ್ಕೃತಿಯ ಸಾಮ್ರಾಜ್ಯ ಕಣ! ಜ್ಞಾನ-ವಿಜ್ಞಾನಕೆ
ಸವಾಲಾಗಿ, ಜಗಕೊಂದು ಅಚ್ಚರಿಯ ಬೀಡಾಗಿ,
ಮೊಗಲರಾಳ್ವಿಕೆಯ ನಲ್ ಕುರುಹಾಗಿ, ಮಮತಾಜಳ
ಭೌತಿಕದೇಹಕೆ ಶಾಶ್ವತ ಮಂದಿರ ತಾನಾಗಿ,
ಭಾರತೀಯ ಅನನ್ಯ ಅನುಪಮ ಪರಂಪರೆಯ
ಕುರಕುಶಲಕಲಾ ಪ್ರದರ್ಶನಮಾಗಿರ್ಪುದೆನೆ
ಸರಿ ಎನಲಕ್ಕು. ತಾಜ್‌ಮಹಲ್ ಎಂದುಮೆಂದಿಗೂ
ಭಾರತ ವರ್ಷದ ಜ್ಞಾನ-ವಿಜ್ಞಾನ ಕಾಣಿರೋ!

—o—

ಕೃಪೆಯ ದೋರು

ಕುಸುಮ ಪ್ರಿಯ ಕುಸುಮ ನೇತ್ರ
ಬಿಸಜ ನಾಭನೆ
ವರಮಭಕ್ತ ಜನರ ನಿತ್ಯ
ಪಾಲಿಸುವವನೆ

ದೀನಪಾಲ ಯೋಗಶೀಲ
ಕಮಲ ನಯನನೆ
ಭವದ ಬೇಗೆ ತಾಳಲಾರೆ
ವೇಣು ಲೋಲನೆ

ಕಮಲ ನಯನ ಹರುಷ ವದನ
ಮದನ ಪಾಲನೆ
ನಮಿಪೆ ನಿನ್ನ ಚೆಂದದಿಂದ
ಸರ್ಪಶಯನನೆ

ತೇಲಿ ನಲಿವ ಮುಗಿಲರಾಶಿ
ನಿನ್ನ ಹೋಲಿರೆ
ಕಣ್ಣು ಮುಗಿವೆ ಕೃಪೆಯದೋರು
ಚೆನ್ನ ಮಹಿಮನೆ

ಬರವು ಬಡಿದು ಹೃದಯ ಕುಂಡ
ಬತ್ತಿ ಬಾಡಿದೆ
ಕರುಣೆಯಿಂದ ಬಂದು ಕಾಯೊ
ಪರಮ ದೇವನೇ

—o—

ನಡೆಮುಂದೆ ನಡೆಮುಂದೆ ರಣರಂಗ ಕರೆಯುತಿದೆ
ಜಡಿಕುಟ್ಟ ಎದೆಗೊಟ್ಟು ನಡೆಯೊ ಮುಂದೆ
ಎಡೆಗೊಡದೆ ಹೆದರಿಕೆಗೆ ಖಡ್ಗವನು ಝಳಪಿಸುತ
ನಡೆ ನೀನು ವೀರಾತಿವೀರನವೊಲ್ !

ನೀ ರಣಕೆ ಹಿಂಜರಿಯದಿರ್ ಬೆದರದಿರ್ ವೀರ !
ಶೂರತನವಿರಲಿ ಎದೆಯಲಿ ಅಣುಗನೆ
ಹಿರಿಜನರ ಹರಕೆಯನು ಹೊತ್ತು ನೀ ನಡೆಮುಂದೆ
ಹರನ ದಯೆ ಇರಲಿ ನಿನ್ನಯ ಮುಡಿಯಲಿ.

ನನ್ನವರು ತನ್ನವರು ಎಂದು ಹಳಹಳಿಸದಿರ್
ನಿನ್ನವರ ಹೊಣೆಯೊಳಿ ಹಿಡಿದೆ ಖಡ್ಗವ
ನಿನ್ನ ರಾಷ್ಟ್ರಕೆ ನಿನ್ನ ಶಕ್ತಿ ಪೂರಕವಾಗಲಿ
ನಿನ್ನತನ ಅರಿತುಕೊಳ್ಳುವದೆ ನಿಜ ಗುರಿ.

ಎಲೆಲೆ, ಘನವಂತ! ವಿಧಿ ಬರೆದ ಮರಣಶಾಸನ
ಎಲ್ಲಿದ್ದರೂ ಬಿಡುವುದೇನೈ ? ನೀನು
ಒಲ್ಲೆನೆಂದರೂ ಕೇಳುವುದೇನೈ ? ನೀ ಮನದಿ
ತಿಳಿದು ನೋಡಿ ಭರವಸೆಯಿಡು ಅಡಿಯಲಿ.

—o—

Colombia tragedy
Nevado del Ruiz

ಓ ಭಗವನ್! ಏಂ ಘೋರಾತಿಘೋರ ಪ್ರಕರಣ!
ನೆನೆಯಲಾಗದ ಉಲ್ಲೇಖಿಸಲಾಗದ
ಸಂಕಟಕರ–ಅತೀ ದುಃಖಕರ ಪ್ರಕರಣ!
ಒಡೆಯಾ! ನೀನೆಲ್ಲಿರ್ದೆಯೋ, ನಿನಗಿನಿತೂ ಕೇಳಿಸಲಿಲ್ಲವೆ
ಆರ್ತಮೊರೆ? ಕಡು ಸಂಕಟದ ಮೊರೆ? ಕಂಬನಿಯ ಮೊರೆ?
ರಣಗೋಳಿನ ಮೊರೆ ಕೇಳಲಿಲ್ಲವೇ ಸ್ವಾಮಿ?

ಕಗ್ಗತ್ತಲು ತುಂಬಿದ ರಾತ್ರಿ!
ಲೋಕವೆಲ್ಲ ಸುಖ ನಿದ್ರೆಯಲಿ
ಶಯನ ಶಾಯಿಯಾದ ಶಾಂತ ಪ್ರಶಾಂತ ರಾತ್ರಿ!
ಭೂತಾಯಿ ಅದಾವ ಕಾರಣದಿಂ ಕೋಪಶಿಖಿ
ಪ್ರಜ್ವಲಿಸಿ ಉಗ್ರರೂಪ ತಾಳ್ದಳೋ....!
ಏಂ ಪರಿತಾಪವೋ ಏಂ ರೋಷವೋ
ಏಂ ಒಡಲ ಸಂಕಟವೋ
ಮುತ್ತಾವ ಕಾರಣವೋ ಪೇಳ್ವರಾರ್?
ಒಡಲಲಿ ಕುದಿಕುದಿದು ನೊಂದು ಮುನಿಂಗೆಟ್ಟು
ರೋಷದಲಿ ಒರ್ಮೆಗೆ ಭುಗಿಲೆದ್ದವೊಲ್
ಬಾಯ್ದೆರೆದು ಮಹಾ ರೋಷದ ಬೆಂಕೆಯಂ ಕಾರಿದಳ್
ಹಾ! ಕುದಿಕುದಿವ ಲಾವರಸ!
ಕೆಸರಿನ ಹೊಳೆ ಹರಿದುದು ಪ್ರಮುನರಾಶಿಯೊಲ್
'ಆರ್ಮರೊ' ಮೇಣ್ 'ಚಿನ್‌ಚಿನಾ' ನಗರಗಳ ಮೇಲೆ
ಉಕ್ಕುಕ್ಕಿ ಹರಿದುದು ಮನೆಮಠಗಳ್ ಮುಚ್ಚಿ
ಹೋಹಂದದಲಿ!

ಘೋರ-ಘೋರಾತಿಘೋರ ಘರ್ಜನೆಯಲಿ
ಲಾವಾರಸ ಮಹಾ ನದಿಯೊಲ್ ಉಕ್ಕಿ ಹರಿಯಿತ್ತೈ
ಸುಖನಿದ್ರಿತ ಜನಂ ಏನುಮೇನೆಂದು
ಯೋಚಿಸುವ ಮುನ್ನ, ಎದ್ದು-ಗಡಬಡಿಸಿ ಎದ್ದು
ನೋಡುವ ಮುನ್ನ ಏನದ್ಭುತ ದುರಂತಂ!
ಏಂ ಅದ್ಭುತ-ಅಖಂಡ ನರ ಮೇಧಂ!
ಆವಾವ ದುಷ್ಟಗ್ರಹಗಳ ಸಂಚಿತ ಹೊಂಚೋ
ಮತ್ತಾವ ಲೋಕದ ದೈತ್ಯರ ರಣಭೇರಿಯೋ
ಇಪ್ಪತ್ತು ಸಹಸ್ರ ಸಂಖ್ಯೆಯಲಿ
ಜನ ಜಂಗುಳಿಯುಂ ಕೊಂದು
ಮೂವತ್ತು ಸಹಸ್ರ ಮಂದಿಯುಂ ನಿರ್ವಸಿತಗೊಳಿಸಿ,
ಗಾಯಗೊಳಿಸಿ ಕೆನ್ನೆತ್ತರಂ ಚೆಲ್ಲಿ ಸೂಸಾಡಿ
ಕೊರಳೊತ್ತಿ ಉಸಿರು ಕಟ್ಟಿಸಿ
ಗೋಳು ಗಿಡಿಸಿದಳ್ ಮಾತಾಯಿ ಭೂದೇವಿ ?
ಆ ರಣ ಗೋಳು, ಆ ರಣ ಹಿಂಸೆ
ಆ ಪರಮ ದುಃಖ ಸಾಮಾನ್ಯಮೋ ದೇವ!
ಪೆತ್ತಮ್ಮನೇ ಕುಪಿತಗೊಳೆ
ಸಲಹುವವರಾರ್ ಒಡೆಯಾ!
ಪಿರಿಯರ್ಕಳ್ ಮಕ್ಕಳಿಗೆ
ಭೂತಾಯಿಯೊಲ್ ಸಹನಾಮೂರ್ತಿಯಾಗಿರು
ಎಂದೆಂಬರಲ್ತೆ ?
ಮತ್ತಿದೇಂ ಇಂತಪ್ಪ ಘೋರ ರೋಷಾವೇಶಂ ?
ಎನಿತೊಂದು ಮನೆಮಠಗಳ ಮುಳುಗಿಸಿ
ಶ್ರದ್ಧೆಶ್ರಮಗಳಂ ಬಲಿ ತೆಗೆದು
ಸಂಜೀವನವಂ ಮುರಿದೊಟ್ಟ ಸ್ವಾಹಗೈದಳಲ್ತೆ
ಒಡಲ್ಗಿಚ್ಚಿಗೆ ನಂಜೂಡಿಸುವ ತೆರದಿ.

→

ಎಂತಪ್ಪ ನಲ್‌ ಮಡದಿ ಮಕ್ಕಳ್‌–ಪ್ರಾಣಿಗಳ್‌
ಕಿಚ್ಚಿನ ಕೆಸರವಾಹಿನಿಯಲಿ
ಕೊಚ್ಚಿ ಹೋದರೋ
ಸಮಾಧಿಯ ಭಂಗ ಮಿನಿತಿಲ್ಲದವೊಲ್‌!
ಅಹ, ನಾಗರಿಕ ರಾಷ್ಟ್ರದ ನಾಗರಿಕರ
ವಿರುದ್ಧ ಸಿಡಿದೆದ್ದು ಯುದ್ಧವೇಕೆ ಹೂಡಿದೆ ತಾಯೆ ?
ಮುಗ್ಧದುಗ್ಧ ಜೀವಿಗಳ ಪ್ರಾಣ ಹರಣಕೆ
ಆವ ಅರ್ಥವೋ ಅನರಿಯೆ.
ಆ ನಾಗರಿಕ ವಲಯದ ಮುದ್ದು ಜೀವನ
ನಿನಗೆ ಪ್ರಿಯವಲ್ತೆ ತಾಯೆ ?
ನಿರಪರಾಧಿಗಳ್‌ ನಿರ್ಬೋಧರ್‌ ನಿರಾಂತಕವಾಗಿ
ನಿದ್ರಿಸುತಿರೆ ಪಾಶವೊಗೆದೆಯಲ್ಲವೇ ತಾಯೆ ?
ಪ್ರಜ್ಞಾವಂತ ಮಾನ್ಯರ್‌, ಜ್ಞಾನ ನಿಧಿಗಳ್‌ ಅರೆತಾಸಿನಲಿ
ಸಗ್ಗಕಡರಿದರಲ್ತೆ ? ಹಾ! ಇನ್ನಾದೊಡಂ
ಶಾಂತಳಾಗು ತಾಯೆ!
ಪಾಹಿ, ಪಾಹಿ, ಪಾಹಿ, ಪರಿಪಾಹಿ!
(ಕೊಲಂಬಿಯ ದುರಂತ ೧೩-೧೧-೧೯೮೫ ಅರ್‌ಮೆರೊ
ಪಟ್ಟಣದಲ್ಲಿ)

—o—

ಪುಷ್ಕರಣಿ

ಗ್ರೀಷ್ಮಂ ಉರಿದುರಿದು ಸುಡುತಿರೆ ತ್ರಿಲೋಕಮಂ
ಸುಡು ಬಿಸಿಲ ಕಾಯ್ಪಿನಿಂ ಸುಟ್ಟುರಿದು
ಜಲಬತ್ತಿ ತಾವರೆಗಳ್‌ ಬಣ್ಣ ವಳಿದು ಬಾಡಿ
ಜೋಲು ಬಿಳ್ದು ಮುಖ ಮಡಿಯಾಗಿರಲ್‌
ಮೀನಂಗಳ್‌ ತಹತಹಿಸುತಿರೆ ಜಲಬತ್ತಿ, ನೋಯುತ
ಬೇಡುವೆ ಸಿರಿಯೊಡಲ ತನಿಜಲ ತುಂಬೆ ವರುಣನಂ.

—o—

ಬರುವನು

ಬರುವನು ಬರುವನು ಮರೆಯದೆ ಬಂದೆ ಬರುವನು
ಅದೋ ಕೇಳು ಕಾಲಂದಿಗೆ ಕಿರುಗೆಜ್ಜೆಯ
ಜಣಿಜಣಿ ಕಿಣಿಕಿಣಿ ಸದ್ದಿನ ಮೃದಲ ನೊಳಗು
ಭಕುತಿಯ ರಸ ಹರಿದಿರೆ ಪಾಲ್ಗಡಲೆನೆ
ಹೃದಯ ಕುಂಡದಲಿ ಕವಿತಾಲಹರಿ ಉಕ್ಕುತಿರೆ
ಒಲಿದು ನಲಿದು ಸಂತಸದಿಂದ ಬಂದೆ ಬರುವನು.

ಆನಂದ ರಸವಾಹಿನಿಯಲಿ ತೇಲಿ ಬರುವನು
ಎನ್ನ ಸಂಕಟದ ಮೊರೆಯನಾಲಿಸುತ
ದೀನದೀನರ ಲೋಲನೆನೆ ಸೌಮ್ಯಮೂರ್ತಿಯಾಗಿ
ತ್ರಿಲೋಕದ ದುಃಖ ಸಂಕಷ್ಟಗಳನು
ತೊಡೆಯೆ ಚಂದದಿಂ ಕಾಡುದಾರಿಯಲಿ ಬರುವನು
ಕಾಡುಮೊಲ್ಲೆ ಪರಿಮಳ ಮೈಗೊಂಡು ಬರುವನು.

ಕಿರುಹೆಜ್ಜೆಗಳನು ಧಿಮಿಧಿಮಿ ಇಡುತ ಬಲುಮೆಯಿಂ
ಬರುವನು ಮನದಿ ದೀನ ಮೊರೆಯ ತುಂಬಿ
ಕರೆದವರ ಪಾಲಿಸೆ ಕರುಣದಿ ಬಂದೆ ಬರುವನು.
ದೀನಲೋಲನಾಗಿ ಪರಮಾನಂದ
ಬಂಧುರತೆಯಲಿ ಬರುವ ಅರವಿಂದ ಲೋಚನಾ
ಶ್ರೀಬಾಲ ಮುಕುಂದ ಮಮ ಹೃದಯ ಮಂದಿರಕೆ !

—o—

ವಸಂತ ಪ್ರಭು

ಜ್ವಲಂತ ಧರಿತ್ರಿಯ ಶರಕಾಂತಾರದ
ಸಹಸ್ರ ಸಹಸ್ರ ಜಿಹ್ವೆಗಳು
ಮುಗಿಲಂ ಮುತ್ತಿಡುವವೊಲ್ ಮೆರೆದಿವೆ
ಚೆಂಬಿಸಿಲ ಚೆಲುವಿನ ರಿಂಗಣ
ದೂರದೂರದಲಿ ಹೊಳೆಯುತ್ತಿವೆ
ಉದ್ದಾಮ ದೃಷ್ಟಿಯ ಕಕ್ಷೆಯಲಿ !

ವಾತ್ಯಾಲುಠಿತ ವಾಲುಕಾರಾಶಿ
ಉದ್ಧೂಮ ಅಗ್ನಿಕುಂಡದೊಲು
ಭಯ ಭ್ರಾಂತಗೊಳಿಸುವಂತಿರೆ
ಉತ್ಸುಕವನ್ನೆ ಉತ್ಸುಕಗೊಳಿಸುವ
ತನುಮನಗಳ ಉರ್ಕು ವಸಂತ
ಪ್ರಭುವಿಗೆ ಸರಿ ಸಾಟಿಯೇ ಸೈ !

ರಜತ ಪಟ್ಟದೊಲ್ ಹೊಳೆಹೊಳೆಯುವ
ಶುದ್ಧವಾಲುಕಾ ಪ್ರಾಂತರವಂ
ಆಚ್ಛಾದಗೊಳಿಪಾ ಹುಮ್ಮಿನಲಿ
ಮುಸುಂಕುತಿರೆ ಮಂಜು ವಾಹಿನಿ
ಪ್ರಾತಃಸಮೀರ ಒಯ್ಯೊಯ್ಯನೆ
ತೀಡಿದಂ ವಸಂತನಿಗೊಲಿದು

ಭೂತಲದಲಿ ನಡೆದಿರೆ ವಸಂತ
      ಪ್ರಭುವಿನ ಒಡ್ಡೋಲಗಂ
ಪೇಳಲೇನಾ ಉರ್ಕಿನ ಸೊರ್ಕಿನ
      ವನಧಿಯಲಿ ವರ್ಣವರ್ಣಾಂತ
ವಿವಿಧ ಪುಷ್ಪಲೋಕದ ಮೇಣ್
      ತಳಿರ್ಲೋಕದ ಪ್ರತಿಭಾಪ್ರಣಾಳಿ !

ಓವೋ, ವಸಂತ ಪ್ರಭು ಐತರೆ
      ತಡೆವರಾರೈ ಸೊಬಗಿನ ಸಂಪದವ ?
ಬಿರು ಬಿಸಿಲಿಗೆ ತಂಗಾಳಿಯು ಬರಿಸಿ
      ಮಕ್ಕಳ ಚೆಂಗೆನ್ನೆಗೆ ರಂಗೊರೆದು
ಹೂಗಳರಳಿಸಿ ಭ್ರಮರಗಳ ಕರೆದು
      ಮೆರೆವನೈ ಪ್ರಭು ಗದ್ದಿಗೆಯೇರಿ !

ನಿರ್ಧೂಮ ಅಗ್ನಿ ಜ್ವಾಲೆಯೊಲ್
      ಉಜ್ವಲಿಸುತ ಮುಗಿಲೇರುತಿರೆ
ಬಾನಿನ ನೀಲಿಯಲಿ ಉದಯಭಾನು,
      ಕರ್ರನೆ ಕಾಮುಳ್ಳಿಗಳ ಹಿಂಡು
ಸುಳಿಸುತ್ತುತ ಪಾರಾಡುತಿವೆ
      ದೀಪವರ್ತಿಕೆಯ ನೆತ್ತುವವೋಲ್

ಕೆನ್ನೀಲಿಯ ಬಾನಿನ ಹಣೆಯಲಿ
ಹೊನ್ನಿನ ಹೊಳೆಯೊಲ್ ಹರಿದಿರೆ
ಕೆಮ್ಮುಗಿಲಿನ ಬಂಧುರವಾಹಿನಿ
ಉಜ್ವಲೋಜ್ವಲ ರವಿಗೆ
ಮುದದಿ ಹೊಂದೆರೆ ಹೊದಿಸುವೋಲ್
ಚೆಂದದಿಂ ಬೀಗಿದೆ ತಾನಾಗಿ !

—o—

ಮನವೇ

ಬುದ್ಧಿಯಿದ್ದು—ಭಾವವಿದ್ದು
ಹೃದಯವಿದ್ದು—ಕರುಣೆಯಿದ್ದು
ಸತ್ಯಪ್ರಜ್ಞೆ—ಧರ್ಮನಿಷ್ಠೆ
ಇಲ್ಲದೊಡೇಂ ಪ್ರಯೋಜನ ?
ಭಾವಿಸಿನೋಡೈ ಮನವೇ

—o—

ಜೀವನ ಸಂಜೆ

ಓ ಭಗವನ್ ! ದುಡಿದುಡಿದು ಹಣ್ಣಾಗಿ ನಡು ಬಾಗಿ
ಇನ್ನು ದುಡಿದು ಉಂಬುವ ಪ್ರಾಯತಾಂ ಮೀರಿರಲ್
ಎಲ್ಲಿಹುದು ಜೀವನೀಯ ಸುಂದರ ದಿನಮಾನ ?
ಚಿತ್ತದಲಿ ನೆಲೆಯಾಗಿರುವುದೊಂದೆ ವ್ಯಸನ ಗೂಬೆ.

ಕುಳಿತರೂ ಚಿಂತೆ, ನಿಂತರೂ ಚಿಂತೆ; ರಾತ್ರಿಗೆ
ನಿದ್ದೆಗೇಡಲ್ಲದೆ ಸುಖಸ್ವಪ್ನವು ಬಹುದೂರ.
ಮನದಿ ಬೇಯಲಾರೆ ದುಡಿದು ಉಣ್ಣಲಾರೆ ದಿನ
ದಿನವು ನೊಂದು ನೋವುಂಬುದಲ್ಲದೆ ಬೇರಿಲ್ಲ.

ಅಂದಿಂದಿನಾ ಸಂಕಟಗಳ ತುಲನೆಯೆ ಮನಕೆ
ಅನುದಿನದ ಕಾಯಕ. ಹಳತು ಹೊಸತು ಕೂಡಾಡಿ
ತೇಲಿ ಹೋಗುತಿರೆ ಕಾಲನದಿಯಲಿ ಆನೇಂಗೈವೆ ?
ನಿಶಿಯ ಶಶಿಯಿಂ ಸೊಗವನುಂಬೆನೆ ? ಉದಯರವಿಯ

ಸೌಂದರ್ಯಮಂ ಕಾಂಬೆನೆ, ಅಸ್ತಮಾನ ಶೋಭೆಯ
ರಸವಾಹಿನಿಯಲಿ ತೇಲ್ವೆನೆ ಮೈಮನ ಮುದುಡಿರಲ್
ಎಲ್ಲಿಯ ಸುಖಾನಂದವೈ ಜೀವನವಾಹಿಸಿಗೆ ?
ಮುದುಡಿ ನಲುಗಿಹ ಮೈಮನಕೆಲ್ಲವೂ ನಿಸ್ಸಾರ.

ನಡೆನುಡಿಯಲಿ ಕಣ್ ದೃಷ್ಟಿಯಲಿ ದಿನದಿನ ಬಲಿವ
ಮಂದಗತಿಯಿಂ ಬೆಸನ ಮನಕೆ. ಜಡತೆ ದೇಹಕೆ.
ಓದುವೆನೆನೆ ಕಣ್ ದಣಿವುವು. ಚಿತ್ರಕಲ್ಪಕದು
ನಿಲುಕದು. ಅಳಿದುದು ಗುರಿಯು ಹಿರಿ ಜಾಡು. ಜಾನಿಸಿ

ಪರಿಭಾವಿಸಿದೊಡಂ ನಿಲುಕದಾವುದು ಚಿತ್ತಕೆ.
ಎಂತು ಕಾಲಯಾಪನೆ? ಇನ್ನೆಂತು ಮನಶ್ಶಾಂತಿ ?

ಬಾಲ್ಯದೊಳೆ ಸಂಗೀತ ಕಲೆಯು ಕೊಲೆಯಾಗಿರಲ್
ಮನಂ ಬರಿದೋ ಬರಿದು! ಇಂತಿರುತ್ತಿರೆಯಿರೆ ಆಂ
ಬಗೆ ಕದಡಿ ದಿಕ್ಕೆಟ್ಟು ನಿನ್ನಂ ಕರ ಜೋಡಿಸಿ
ಭಕ್ತಿಯಿಂ ಬೇಡುವೆನ್ನೈ ಕಣ್ ಮುಗಿದು ಕಾಲ್ವಿಡಿದು
ನೀನ್ನೈದೆನ್ನ ಕರೆದೊಯ್ ತವ ಸೇವೆಗೆ ದೊರೆಯೇ!
ನಿನ್ನ ಧ್ಯಾನದಲಿ ನಿನ್ನ ಪೂಜೆಯಲಿ ನಿನ್ನಯು
ನೇಮದಲಿ ಕಳೆವೆ ಚಣಚಣಂ ನಿನ್ನನೆ ಸೇರ್ವ
ಮಹದಾಸೆಯಲಿ ಹೇ, ದಯಾನಿಧೆ! ಕರುಣೆಯಿಂದೆ
ಕರುಣಿಸೆನ್ನ ಗೋಳನರಿತು ಹೇ, ಮಮ ಒಡೆಯಾ!
ನಿರ್ಲಕ್ಷಿಸಿ ನಿರಾಕರಿಸದಿರ್ ಜೀವನದೊಡೆಯಾ!
ನಿನ್ನ ಪೂಜೆಯ ನೇಮದಲಿ ಗೈದೆ ಕವಿಕಾವ್ಯ
ರಸಾಯನವಂ ಸ್ವೀಕರಿಸಿ ಮುಕ್ತಿ ನೀಡೊಡೆಯಾ!

—o—

ಕನ್ನಡ

ಕನ್ನಡ ಭಾಷೆ ಬೆಳೆಯೆ
ಕನ್ನಡ ಮಾತು ಬೆಳೆಯೆ
ಕನ್ನಡ ದೇಶ ಬೆಳಗೆ
ಕನ್ನಡಿಗ ಪಣ ಕಟ್ಟದಿರೆ

ಕನ್ನಡಿಗರ ಉದ್ಧಾರ
ಕನ್ನಡದ ಉದ್ಧಾರ
ಎಂದೆಂದಿಗೂ ಆಗದು

—o—

ಲೀಲಾ ಖೇಲನ

ಹೇ, ಒಡೆಯಾ! ನಿನ್ನ ಸಕಲಲೀಲಾ ಖೇಲನವು
  ಮಧುಮಾಸದ ಮೋದಕೆನಲ್ ಮಧುಕರಿ
ಮುದದಿಂದಲಿ ಪೂವಿಂ ಪೂವಿಂಗೆ ಪಾರಾಡಿ
  ಮೃದು ದನಿಯಲಿ ಗೀತವ ಪಾಡುತಿರೆ....ತವಲೀಲೆ !

ಹೇ, ನಿಖಿಲ ದೇವಾದಿದೇವ ಸಕಲವೂ ತವ
  ಆನಂದ ಪೂತ ಹೃದಯ ಕಮಲದಲಿ
ಅನನ್ಯ ಅನುಪಮ ವೇಶದಿಂ ಮೂಡಿ ಬಂದಿರೆ
  ಎನಿತು ಸೊಗದ ಸುಧೆಯೀ ಜಗತಂತ್ರ....ತವಲೀಲೆ !

ಬೆಳಗಿನಲಿ ಅರೆಯರಳ್ದು ನಲಿ ನಲಿವ ಪೂವಳಿ
  ಪೊಳೆಪೊಳೆವ ಇಬ್ಬನಿಗಳನಾಂತು ನೆರೆ
ನಳನಳಿಸಿ ತಂಗಾಳಿಯಲೆಪದಿಂ ತಲೆದೂಗಿ
  ತಳಿರ ಹಸುರಿಗೆ ಸಿಂಗರಗೈವುದು....ತವಲೀಲೆ !

ನದನದಿಯಲಿ ಜಳಜಳನೆ ಪರಿದೋಡುವ ಜಲಧಿ
  ಮೃದು ಮಧುರ ರಾಗವಂ ಬಿತ್ತರಿಸುತ
ಚಿದಾನಂದ ಚಿನ್ಮಯತೆಯಿಂದಲಿ ಮುಂಬರಿಯೆ
  ಬಿಂದು ಬಿಂದುಗಳೊಂದುಗೂಡುವುದು....ತವಲೀಲೆ !

—o—

ಉದಯಮಾನ

ಓ ಪರಮಾತ್ಮ ನಿನ್ನಯ ಪ್ರತೀಕಮಲ್ತೆ ಉದಯರವಿ?
ದಿನದಿನ ತವ ಪ್ರತ್ಯಕ್ಷ ಪ್ರಮಾಣದ ಮಾಳ್ಕೆಯಲಿ
ದೂರ ಸೀಮಾ ಕ್ಷೇತ್ರದೊಳ್ ಎಳ ಮುಂಬೆಳಕು
ಪರಬ್ರಹ್ಮನ ಕಮಂಡಲದಿಂ ತುಳುಕಿತೊ ಎನಲ್
ರಜತಾದ್ರಿಯ ಬೆಂಗಡೆಯಲಿ ಚೆಲ್ಲಿ ಸೂಸಿದುದು !
ಚಂದನ ಹಳದಿ ಮಿಶ್ರಿತ ಸುವರ್ಣ ಕಾಂತಿಯಲಿ
ಕೆನ್ನೀಲಿಯ ಮೈಯಾಂತಿರೆ ಮುಗಿಲಿನ ಬೃಹತ್ತಮ
ಗೋಪುರಗಳ ಮಂಗಳ ಶ್ರೇಣಿಯಲಿ ತೂರಿ ಬಹ
ಸುಕೋಮಲ ಅರುಣ ಕಿರಣಗಳ ಹೊಂಗಾಂತಿಯಲಿ
ಮನಃಚಿತ್ತ ಮುಗ್ಧದುಗ್ಧಮಾದುದೈ ಎನ್ನೊಡೆಯಾ ?

ನಸುಗಳ್ತಲೆ ಪಿಂಜರಿಯಲ್ ಮಂಜುವಾಹಿನಿಯು
ರಜತವಾರಿಯೊಲ್ ಥಳಥಳಿಸುತಲಿ ಮೈದೋರ್ದುದು.
ಮತ್ತಾಗಳ್ ಉದಯರವಿ ಮೆಲ್ಲನೆ ಮೇಲೇರೆ
ಪಚ್ಚವಾರ್ಧಿಗೆ ಮಿಸುನಿಯ ನಸುಲೇಪವನೊರೆದು
ಸೇವಂತಿಗೆ, ಮಂದಾರ, ಗುಲಾಬಿ ಪೂಗಳ
ಮುದ್ದಿನಿಂ ಲಾಲಿಸಿ ಬಿಳಿಯ ಮೊಲ್ಲೆ ಮೊಗ್ಗುಗಳ
ಮೈದಡವಿ ನೀರಜಂಗಳನೋಲೈಸುತಿರಲಾ
ಗಳಿಗೆಯಲಿ ಮುಂಬಕ್ಕಿಗಳೆದ್ದು ಎರೆಂಕೆಯಂ
ಒದರಿ ಪಟಪಟಿಸಿ ಕೊರಳೆತ್ತಿ ಉದಯರಾಗವ
ಬಿತ್ತರಿಸಿದುವು ಸುಖಾನಂದ ಮೋದದಿಂದಲಿ.

ಅದೋ ಮಂಜುವಾಹಿನಿಯ ತೆರೆಯೊಳ್ ಮರೆಯಾದುದು
ಜಗಜಗಿಪ ರವಿಯ ಸ್ವರ್ಣಬಿಂಬ ! ಏರುತ್ತೇರಿ
ಮುಗಿಲ ದಿಣ್ಣೆಯಲಿ ಪೂರ್ಣ ಮರೆಯಾಗೆ ತಳದಲಿ

→

ಹೊರಹೊಮ್ಮುವ ಶೋಣಿತ ವರ್ಣಾಂತ ಗೆರೆಯಂಚು!
ಅಹಹ, ಏಂ ಸುರಮ್ಯವೊ ತವದರ್ಶನ ಜಗದೀಶ!
ಏಂ ಉಜ್ವಲೋಜ್ವಲ ಕಿರಣಸಾಂದ್ರ! ಏಂ ನಿನ್ನ
ಮಹೋನ್ನತ ಕಾಂತಿ! ಏಂ ತವ ನಿಚ್ಚ ಪರ್ಯಟಣ?
ಏಂ ಇನಿತು ಕುಂದದ ತವ ಚಿರ ಯೌವನ ಯಾತ್ರೆ!
ಎಂದಾದೊಡಂ ಯಾತ್ರೆ ಕೊನೆಗೊಂಬುದೆ ಅಯ್ಯ,
ನಿನ್ನ ಸಂಯಾತ್ರೆಗೆ ಎಣೆಯುಂಟೇ ಈ ಜಗದೋಳ್?

ಶೀತಶೀತಲ ಮಾರುತನ ಮೃದು ಮಂದಮಯ
ಚಾಮರೀ ಸೇವೆ ನೆರೆ ನಡೆದಿರಲ್ ಹೂಗಂಪು,
ನೀರ್ಗಂಪು, ಮಣ್ಗಂಪು, ತರುಲತೆಯ ನರುಗಂಪು,
ಒಯ್ಯೊಯ್ಯನೆ ತೇಲಿಬರುತಿರೆ ತನುಮನಗಳ್
ಮುದದಿಂ ಪುಳಕಿತಮಪ್ಪವೊಲ್. ಅಹ, ಎಂತಪ್ಪ
ಆನಂದಮಯಮೊ ಈ ಜಗತ್ ವ್ಯಾಪಾರ ಕ್ರಮ!
ಚಣ ಹಿಂಚದೆ ಚಣ ಮಿಂಚದೆ ತದೇಕರೀತಿಯ
ನಿಯಾಮಾವಳಿಯ ಜಗನ್ನಿಯಾಮಕನಿಗಲ್ಲದೆ
ಬೇರೊಬ್ಬರಿಗೆ ಸಾಧ್ಯಮೇ ಈ ಜಗತ್ತಿನಲಿ?

ಕಮಲ ನೈದಿಲೆಗಳರಳಿದುವು, ಮೊಲ್ಲೆ ಮೊಗ್ಗುಗಳ್
ಬಿರಿದುವು, ಗುಲಾಬಿ ಅರಳಿ ಪುಷ್ಪಾಳಿಯ ಲೋಕ
ಬಾಲನೇಸರಿಗಾರತಿ ಎತ್ತುವುವೊ ಎನಲ್ಕಾ
ಭುವಿ ಸಂತಸದ ಊಟಿಯಾದುದು ರವಿಯುದಯದಿ!
ಕಾಜಾಣ ಕೋಗಿಲೆಗಳ ರಾಗಾನುರಾಗಂ
ಮನಮೋಹನೀಯ ತಾನವಿತಾನದಿಂದೊಪ್ಪಿ
ಹಾಡುತಿರೆ ಬಾನೇರಿದ ಎಳನೇಸರ್ ಹರುಷದಿ!
ಕವಿಕಾವ್ಯದ ಹೊನ್ನಾರತಿ ಎತ್ತುವೆ ಕೊಳ್ಳಯ್
ಹೇ, ಉಜ್ವಲೋಜ್ವಲ ಜಗತ್ಕಾರಣ ಶಿರೋಮಣಿ!

—o—

ಕಾಳಿ ಅಪ್ಪಣೆ

ನಿದ್ದೆ–ನಿದ್ದೆ, ಎಂತಹ ಗಾಢ ನಿದ್ದೆ ?
ಕನಸಿಗಾಗರವಾದ ಸವಿನಿದ್ದೆ !

ಕಟ್ಟಿರುಳ ನಟ್ಟನಡುವೆ ತಂಗಾಳಿ
ತೀಡಿತು ತಣ್ಣಗೆ ಮೈಮನ ಮುದ್ದಿಸಿ.

ಬ್ರಾಹ್ಮೀ ಮುಹೂರ್ತದಿ
ಕಂಡೆನ್ನೈ ಕಾಳಿಕಾಲಯಮಂ ;
ಕರಿಕಲ್ಲಿನಲಿ ಕಡೆದ ದೇವಿ ಮೂರ್ತಿ
ತೆಕ್ಕನೆ ನುಡಿಯುತಿಂತು ಬಾಯ್ದೆರೆದು,

"ಏಂಗೈದೆ ಕರುಣಿಸಿ ನಿನ್ನ
ಕೈಗಿಕ್ಕಿರೆ ಲೆಕ್ಕಣಿಕೆಯ ?
ಲೇಖಿಸಿದೆಯೇಂ ನಿಮ್ಮ ಬನ್ನಭಂಗವ ?
ಕಾಗೆ–ಗುಬ್ಬಿ, ನಾಯಿ–ಬೆಕ್ಕುಗಳ ವ್ಯರ್ಥಕಥೆಗಿತೆ
ಕೀಚಿ ಕೀಚಿ ಹೊತ್ತು ಕಳೆವರೇಂ ಗೊತ್ತು ಗುರಿಯಿಲ್ಲದೆ?

ಛಿಃ ! ಛಿಃ!! ನಾಣ್ಗೇಡು ! ಬುದ್ಧಿಗೇಡು
ಏನೀ ವ್ಯರ್ಥಾಲಾಪ ?
ಲೋಕ ನಗದೇ ನಿನ್ನ ವ್ಯರ್ಥಸಾಸಕೆ ?
ಕಣ್ ಬಿರಿಬಿರಿ ಬಿಟ್ಟು ನೋಡು ಸುತ್ತ ಮುತ್ತ !

ನಿನ್ನ ಬದುಕಂ ಜಾಲಾಡಿಸಿ ನೋಡು !
ಅಕ್ಕ ತಂಗಿಯರ ಭಂಗವರಿತು
ಆರ್ಥಿಕ ವೈಯ್ಯಕ್ತಿಕ ಸ್ವಾತಂತ್ರ್ಯವ ಸೋಸಿ
ಬುದ್ಧಿ ಸಿದ್ಧಿಗಳ ಅಳೆದು ನೋಡು!
ನೋವು–ನಲಿವುಗಳ ಬಸಿದು

ಗೀಚಿ ಬರೆ, ಕೊರೆದು ಬರೆ, ಒತ್ತಿ ಬರೆ!
ಲೋಕ ಅರಿಯಲಿ ನಿಮ್ಮ ಭಂಗ ಬವಣೆ!

ಸಾಮಾಜಿಕ ಶೋಷಣೆ! ರಾಜಕೀಯ ಶೋಷಣೆ!
ಧಾರ್ಮಿಕ ಶೋಷಣೆ! ನ್ಯಾಯ–ನೀತಿ ಶೋಷಣೆ!

ಸರ್ವಾಧಿಕಾರ ಧೋರಣೆ! ಹೀನ ಶಾಸ್ತ್ರಗಳ ಸಂಕೋಲೆ
ಇಂಥಿಂಥಹ ದರಿದ್ರಾಲಂಕಾರ ದೈವದತ್ತವೇ?

ನಿನಾತ್ಮ ಪ್ರಿಯವಲ್ಲವೇ ಪರಮಾತ್ಮಂಗೆ?
ನೀಂ ಹೆತ್ತೊಡಲ ನಲ್ಮೆಯ ಕೂಸಲ್ತೇ?
ಯಾಜಮಾನ ಶಾಹಿಗೆ ಮಣಿದು ನಿನ್ನಿರುವ ಮರೆವರೆ?

ನಿನಗೇತರ ಕೊರಂ? ನೀಂ ಆತ್ಮರಹಿತಳೇ?
ನೀನೆಂತು ಹೀನೆ? ನಿನಗೇತಕೆ ಹಿನ್ನಡೆ?

ನಿನ್ನನರಿತು ಹೊನ್ನರಸದಲಿ ಚಂದದಿಂದ ಲೇಖಿಸು!
ಲೆಕ್ಕಣಿಕೆಯ ಮಸಿ ಆರುವ ಮುನ್ನ
ನಿನ್ನ ಕಣ್ಬೆಳಕು ನಂದುವ ಮುನ್ನ
ಲೇಖಿಸು! ಉಲ್ಲೇಖಿಸು!!

ಎಂದಿಗೂ ಅಂಜದಿರು ಮರಣ ಶಾಸನಕೆ!
ನೀನಳಿಸಲಾರೆ ವಿಧಿಲಿಖಿತ ಲಲಾಟಪಟ್ಟದಲಿ!”

ಕೇಳಿದೆ ಕಾಳಿಕಾವಾಣಿ ಬೆದರಿದೆ! ಬೆವರಿತು ಮೈ!
ಕಣ್ತೆರೆದೆ ಕನಸಿನಲೋಕ ಮಂಗಳ ಮಾಯ!
ಕಾಳಿಮಾತೆಯ ಅಪ್ಪಣೆ ಮನದಲಿ ನಿಚ್ಚಳ!

—o—

ನಾವು ಮರುಳರಯ್ಯಾ

ಹಚ್ಚನೆ ಗಿಡುಗಳ ಮೇಲೆ
ಅರಳಿ ನಳನಳಿಸಿರೆ ಪೂಗಳು
ಆ ಸೌಂದರ್ಯವಂ ಕಣ್ದಣಿಯ ನೋಡಿ
ಆನಂದಿಸುವ ಬದಲ್
ಗಿಡದಿಂದವುಗಳ ಕಿತ್ತು
ಮುಡಿಗಿಕ್ಕುವ ನಾವು
ಮರುಳರಯ್ಯಾ ಮರುಳರು !

ಹುಟ್ಟು ಸಾವುಗಳ ಮರೆತು
ಹಣಕಾಗಿ ಬಾಯಿಬಾಯಿ ಬಿಡುತ
ನಾವು ಮಾರ್ಗವ ಹಿಡಿದು
ಹಣವನು ಮೊಗೆದು
ಸ್ವಾನುಭವಿಸಲರಿಯದೆ
ದರಿದ್ರರ ಪುರೋಭಿವೃದ್ಧಿಗೂ
ನೀಡದೆ ಅವಿತಿಡುವ ನಾವು
ಮರುಳರಯ್ಯಾ ಮರುಳರು !

ಈ ಜಡದೇಹಕೆ
ಚಿನ್ನ ದೊಡವೆಗಳ ಸಿಂಗರ
ಪೀತಾಂಬರಗಳ ಆಲಂಕರಣ
ಮೇಣಾಡಂಬರದ
ಬಾಳುಬದುಕಿಗೆ ಮಾರು ಹೋಗಿ
ಬುದ್ಧಿ–ಜ್ಞಾನ–ವಿಜ್ಞಾನಗಳ
ಅಲಕ್ಷಿಸುವ ನಾವು
ಮರುಳರಯ್ಯಾ ಮರುಳರು !

— o —

ಕಸ್ತೂರಿ ಮಾಲಿಕಾ-೫೯

ಅಸ್ಥಿರಂ ಜೀವಿತಂ ಲೋಕೇ

ಈ ಲೋಕಾಲಯದಲಿ
ಜೀವನೀಯ ಬುದ್ಬುದಗಳ್

ಏಳುತಿವೆ, ಏಳುತಿವೆ, ಏಳುತಿವೆ
ನೀಲವಾರ್ಧಿಯ ನೊರೆಗಳಂ ಮಾರಿ!

ಕಲ್ಲ ಮೇಲೆ ಕಲ್ಲ ನಿಟ್ಟು ಭದ್ರ
ಮನೆ ಮಾರು ಕಟ್ಟಿ

ಭವ್ಯ ಭವಿಷ್ಯವ ನೆಯ್ದು
ಧನ ಕನಕವ ಗಳಿಸುತಿವೆ

ಮಹಾ ಬದುಕಿನ ಹೇರಾಶಿಯಲಿ!
ಬದುಕು ಅಲ್ಪವೊ ಧೀರ್ಘವೊ

ಅರಿತವರಾರ್? ಇಂದೋ ನಾಳೆಯೋ
ಬಿದ್ದು ಹೋಗುವ ಈ ಜಡ ದೇಹಕೆ

ಏನೆಲ್ಲಾ ಸಂಭ್ರಮ ಶಿವನೇ!
ಜೀವವಿರುವತನಕ-ಶಕ್ತಿಯಿರುವತನಕ

ಲೋಕ ಸೇವೆ ಗೈವುದೊಂದೇ
ಪುಣ್ಯಕಾರ್ಯಂ ಮೋಣ್ ಜನ್ಮಸಾರ್ಥಕಂ.
ಅಸ್ಥಿರಂ ಜೀವಿತಂ ಲೋಕೇ

—o—

ದೇಹಾತ್ಮ

ಆತ್ಮ-ಪರಮಾತ್ಮನ ನಂಟು
ಪಿರಿದಾದೊಡಂ
ದೇಹಾತ್ಮದ ಸಿರಿಗಂಟು
ಸಾಮಾನ್ಯಮಲ್ತು !

ಜೀವನ ಪರಿಪೋಷಣೆಗೆ
ಸಾಧಕಮಾದ
ದೇಹ-ಧೀರೋದ್ದಾತ ದೇಹ
ಸರ್ವಸಾಧನೆಗೂ
ತಾನಾಗುವ ಈ ದೇಹಮೇಂ
ಸಾಮುನ್ಯವಲ್ತು !

ಸತ್ಯಧರ್ಮಗಳ ನೇಮದಲ್ಲಿ
ದಿನನಿಚ್ಚ ಪೂಜೆಗೈದು
ಭಕ್ತಿಯಿಂ-ಧ್ಯಾನದಿಂ ತಪಂಗೈದು
ಭಜನ ಗೇಯಮಂ ಪಾಡಿ
ಬಾಜಿಸುತ ಸೇವೆ ಗೈವ ದೇಹ
ಸಾಮಾನ್ಯಮಲ್ತು!

ದೀನದಲಿತರ ಕೂಪದಿಂದೆತ್ತಿ
ಧರ್ಮದ ಹಾದಿಗೊಯ್ವ
ವೇದ ಸಾರವರಿತು ನಿತ್ಯ
ಆಧಾತ್ಮ ಚಿಂತನೆಗೆ
ತಾನೇ ತಾನಾಗುವ ಉತ್ತಮದೇಹ
ಸಾಮಾನ್ಯವಲ್ತು!

→

ಚಿತ್ರಗುಪ್ತ

ಎಣೆಯಿಲ್ಲದ ಕರ್ಮಶಾಲಿ
ಒತ್ತಿಯೊತ್ತಿ ಬರೆಯುತಿಹ
ಮಹಾನ್ ಕರಣಿಕ–ಚಿತ್ರಗುಪ್ತ !
ಆದಿ ಅಂತ್ಯವಿಲ್ಲದ ಕಾಲಪತ್ರದೊಳ್
ಚಿತ್ರ ವಿಚಿತ್ರ ಲಿಪಿಯಲಿ
ಲೋಕದ ಬಾಳ್ ಭವಿಷ್ಯವ ಕೊರೆದು
ಅಕ್ಕರವಲ್ಲದ ಅಕ್ಕರದಲಿ
ಬರೆದು ಎಲ್ಲ ಜೀವನಗಳ
ಜಾಲಾಡುವೆ ಮೋದಾಮೋದದಿಂ !
ಯಮನ ಕಾರಕೂನ, ನಿತ್ಯ ಸತ್ಯ ಚರಿತ್ರ
ಚಿತ್ರಗುಪ್ತ ಮಹೋದಯ !
ವಿಧಿಯ ನಂಟ, ಬ್ರಹ್ಮನ ಬಂಟ;
ಮಿಣುಕುವ ನಕ್ಷತ್ರದವೊಲ್
ನೋಡುತಿಹೆ ನೋಡುತಿಹೆ
ನೇರ ದೃಷ್ಟಿಯೊಳೆಲ್ಲ ಸೃಷ್ಟಿಯ.
ಅರಿತರಿತು ಇತಿಹಾಸವ
ಬರೆಬರೆದು ಪೇರಿಸುವ
ಕಾರಕೂನ ನೀನು.
ಆದಿ ಅಂತ್ಯವರಿಯದ, ದಣಿವು ಕಾಣದ
ಉದ್ದಾಮ ಕರಣಿಕ ನೀನು !
ಎನ್ನ ಬಾಳಿನ ನರಕ ವಿಶೇಷವ
ಏನೆಂದು ಬರೆದೆಯೊ ಹೇ, ಬಂಧು ಮಿತ್ರ ?

—o—

ವಿಶ್ವ ಪಾತ್ರಿ

ಓ, ವಿಶ್ವಧಾತ್ರಿ ! ಎಲ್ಲಿ ನಿನ್ನ
ದಾಂಗೆತ್ತ ವಿಶ್ವ ಪಾತ್ರಿ ?
ವಿಶ್ವವ್ಯಾಪಿ ತಾಪ್ಪ್ರಗಳಲಿ
ಜಾತಿ ನೀತಿ ಬೆಳೆದು ಬಂದು
ವರ್ಗ ಭೇದ ಒಡೆದು ಮೂಡಿ
ಜನರ್ ಕೀಳು ಸೂತ್ರ ಹಿಡಿದು
ಬಾಳಿದರೇನಕ್ಕು ?

ಸಣ್ಣ ಮನದ ಹೇಸು ಭಾವ
ಬಲಿತು ನೀತಿ ರೀತಿ ಕೆಟ್ಟು
ಕಲುಷವಾಗೆ ಜನುವು ಜವದಿ;
ಅಲ್ಲಿ ಇಲ್ಲಿ ಎಲ್ಲ ಕಡೆಯು
ಬಾಳು ನರಕ ; ಬದುಕು ನರಕ;
ಇನ್ನು ಏಕೆ ಸುಮ್ಮನಿರ್ಪೆ
ಓ, ಎನ್ನ ವಿಶ್ವಧಾತ್ರಿ ಮಾತೆ ?

ನೀನೆ ಏಕ ಸೂತ್ರ ಹಿಡಿದು
ನಡೆಸು ವಿಶ್ವ ಪಥವ ತೋರಿ
ಕಲುಷ ಮತಿಯ ತೊಳೆದು ಕೊಳೆಯ
ಜತನದಿಂದ ಜಾತಿ ನೀತಿ
ಕಿತ್ತು ಬಿಸುಡು ಲೋಕದಲ್ಲಿ
ಮನುಜ ಮತಿಯು ಬೆಳೆದು ಬರಲಿ
ವಿಶ್ವದೇಕ ಮಾರ್ಗದಲ್ಲಿ. →

ಮೇಲು ಕೀಳು ಪೂರ್ಣ ಅಳಿದು
ಬಂಧು ಭಾವ ಬೆಳೆದು ನಿಂದು
ನೇರ ಹಾದಿ ಹಿಡಿದು ನಡೆಯೆ
ವಿಶ್ವ ಪಥವೆ ನರಗೆ ಬದ್ಧ
ಚಿತ್ರ ಭಿತ್ತಿ ತೊಳಗಿ ಬೆಳಗೆ
ಭವ್ಯ ಸೂತ್ರ ; ದಿವ್ಯ ಮಂತ್ರ ;
ಓ ! ವಿಶ್ವ ಧಾತ್ರಿ ನಿನಗೆ ನಮೋ
ಮತ್ತೆ ಮತ್ತೆ ನಮೋ ನಮೋ !

—o—

ಮುಗ್ಧ ಮನವೇ

ನವಯುಗದ ಮಾನ್ಯರು
ನಾಗರಿಕತೆಯ ನೇಮದಲ್ಲಿ
ಮಾನವೀಯತೆಯ ಮರೆವರು
ಮಾನುಷ ಮಹಿಹಂ ಮಾಣರು
ಮಾನಿಷಗಳ್ಗೆರ ದೂರವಿಡು
ಓ ಎನ್ನ ಮುಗ್ಧ ಮನವೇ !

—o—

ಜೀವ ನದಿ

ವಿಶ್ವ ನರನಾಡಿಗಳಲಿ ಪ್ರವಹಿಪ
ಅನನ್ಯ ಅನುಪಮ ಪ್ರಾಣವಾಹಿನಿಯು
ಸುಲಲಿತ ಸಲಿಲವಾಗಿ ಜಳಜಳಿಪ
ಜಲವಾಹಿನಿಯವೊಲ್ ಹರಿದಾಡುತಿದೆ
ಎನ್ನಂತರಂಗದಲಿ ನಿರಂತರ
ಕಾವ್ಯಕನ್ಯೆಯ ಪ್ರಾಣವೆ ತಾನಾಗಿ !

ಜೀವನದಿ ಹರಿದು ಮಣ್ಣ ಧೂಳಿನ
ಕಣಕಣದಲಿ ನುಸುಳಿ ರಮಣೀಯ ಸಸ್ಯ
ಶ್ಯಾಮಲ ತೃಣದಲಗಳಲಿ ಅರಳಿದ
ಸುಮಸಮುಚ್ಚಯಗಳಲಿ ಮಕರಂದವ
ತುಂಬಿ ಕರೆವುದು ಭ್ರಮರ ಕೋಟಿಯಂ
ಸರಾಗದಲಿ ದೂರಾದ್ದೂರದಿಂದೆ.

ಓ, ಜೀವ ನದಿಯೆ ! ನೀನೆನ್ನ ಮನವ
ತುಂಬಿ ಚಿತ್ತವ ತುಂಬಿ ಹೃದಯ ತುಂಬಿ
ಜಗದುಸಿರಿಗೆ ಪಕ್ಕಾಗಿ ಜೀವನ
ಕ್ಷೇತ್ರದ ನೆರವಾಗಿ ವರವಾಗಿ ಮಿಗೆ
ಸರಸತಿಯ ಸೇವೆಯಲಿ ಪುಟವಿಡಿಸೆ
ಜನುಮ ಸಾರ್ಥಕವೈ ಕವಿತಾಮತಿಗೆ

—o—

ಸಿಡ್ನಿ ಹಾರ್ಬರ್ ಸೇತುವೆ

ಏರುತ್ತೇರುತ್ತೇರುತ್ತೇರಿ ಗಗನದೆತ್ತರ ;
ಮೆಲ್ಲಮೆಲ್ಲನೆ ಮುಗಿಲ ಮುದ್ದಿಸುವ ಮಾಳ್ಕೆಯಲಿ
ಕೆಮ್ಮನೆ ಮೆರೆಯುತ್ತಿದೆ ಕರ್ಬುನದ ಮಾಸೇತು !
ಸಿಡ್ನಿಯ ರೇವಿನಲಿ ಅತ್ಯದ್ಭುತ ಆಕಾರದಲಿ
ನೋಳ್ಪರ್ಕಣ್ ತೆಕ್ಕನೆ ಅಚ್ಚರಿಯಿಂದರಳುವವೊಲ್ !
ಜಗದ್ಭವ್ಯಮಾ ಮಾನವಕೃತ ಅಮೋಘ ಕೃತಿ
ಅಪೂರ್ವಂ, ಅವರ್ಣನೀಯಂ, ಅಸಮಾನ್ಯಂ !
ಧರಣಿ ಮಂಡಲದಲಿ ನಿಸರ್ಗಕೆ ಸವಾಲೆಸೆದ ಕೃತಿ !
ಅದ್ಭುತ ರೇವಿಗನುಗುಣವಾಗಿ
ಜಗನ್ಮೋಹನಕತೆಯಲಿ ನಿಂದಿದೆ ನೋಡಾ !
ಸರ್ವಾಂಗೀಣ ಸುಭದ್ರತೆಗೆ
ಜ್ಞಾನ-ವಿಜ್ಞಾನ-ಸುಜ್ಞಾನಗಳ್ ಒಗ್ಗೂಡಿ
ಅನುಪಮ ಕಾರ್ಯಕಾರಣಗಳ ಅದ್ಭುತ ವೈಖರಿಯಲಿ
ಜಡಭರತರ ಕಣ್ಣಿಗೆ ಬೆರಳ್ ಚುಚ್ಚುವವೊಲ್
ಸೃಜಿಸಿದೀ ಮಾಸೇತು ಜಗದಚ್ಚರಿಯುಳೊಂದೆನೆ
ವಿಶೇಷಮಲ್ತು ; ಪ್ರಪಂಚದಲಿ ಅತ್ಯಂತ ಹಿರಿದಾದ ಸೇತು !
ಸಾವಿರದನೂರೈವತ್ತು ಅಡಿಗಳ ಉದ್ದಳತೆ !
ನಾನೂರನಲವತ್ತು ಅಡಿಗಳ ಎತ್ತರ !
ಎನೆ ಪರಿಭಾವಿಸಿ ನೋಡಾ ಕೃತಿಯ ಮಹತ್ತರಂ !
ಅದರ ನಿರ್ಮಾಣ ಮುಗಿದುದು
ಸಾವಿರದೊಂಭೈನೂರಮೂವತ್ತೆರಡರ ಶುಭದಿನಂ !
ಅತ್ಯದ್ಭುತಂ Sydney Harbour Bridge

—o—

ಜೀವನವಾಹಿ

ಓವೊ, ಜೀವನವಾಹಿಯಲಿ ಮುಳುಗಿ ತೇಲಿ ನೆರೆ
ನಲುಗಿದೆನ್ನೈ ಕಡು ಕತ್ತಲೆಯಲಿ ದಾರಿ
ಕಾಣದೆ; ಎನಿತೆನಿತು ತಡುಕಿದರು ಹಿಡಿಯದಾದೆ
ಸರಿದಾರಿ. ಎಡವುತ ತೊಡರುತ ನಡೆದೆ-
ನೇಕಾಂಗಿ ದೂರದೂರ ಗಮ್ಯದ ಹಾದಿಯಲಿ.

ಈ ಧರೆಯೊಳೆಮ ಬಾಳು ಕಡಿಗತ್ತಿ-ಕಿಡಿಮಾತು-
ಕಡಿವಾಣಗಳ ಸುಖಾಶ್ರಯಮಲ್ಲದೆ
ಮತ್ತೇನಿಲ್ಲಂ. ಕಲಿತು ಬಲಿತೊಡಂ ಹೆಜ್ಜೆಯನು
ಮುಂದಿಡಲನುವುಂಟೆ ? ಸುಸಂಸ್ಕೃತಿಯ
ನೇಮದಿ ನಡೆವ ಘೋರ ಪಾತಕವ ತಡೆವರಾರ್ ?

ನಿನ್ನಾಶ್ರಯವಿಲ್ಲದ ದೋಣಿ ಎಡತಾಕುತಿರೆ
ನಡೆವುದೆಂತೀ ಜೀವನೀಯಾತ್ರೆಯು
ನೀನಲ್ಲದೆನಗೆ ಆರಾರ ಭರವಸೆಯಿಲ್ಲೈ
ಆವ ಗಳಿಗೆಯಲಿ ಕಳೆವುದೊ ಹುಟ್ಟು
ಕಾಣೆನ್ನೈ ನೀ ಕೈಹಿಡಿದು ನಡೆಸೈ ಜೀವೇಶ !

—o—

ಕಾನಿಷ್ಕ ವಿಮಾನ ದುರಂತ

ಸಹಸ್ರಾವಿರದೊಂಭೈನೂರೆಂಭತ್ತೈದನೇ
ವರ್ಷದ ಜೂನ್ ತಿಂಗಳ ಇಪ್ಪತ್ಮೂರನೇ ತೇದಿ
ಅತ್ಯಂತ ದುರದೃಷ್ಟಕರ ದಿನಂ !
ಅವಾವ ದುಷ್ಟಗ್ರಹಗಳ ಚೋದನೆಯೋ
ಮತ್ತಾವ ಯಕ್ಷಿಣಿಗಣದ ಆಕ್ರೋಶವೋ
ಇನ್ನಾವ ಕ್ಷುದ್ರ ಜನರ ರೌದ್ರದಾಟವೋ
ಸಿಡಿಸಿತಲಾ ನಿಗೂಢ ತರದಿ ಗಗನಯಾನ ಮಧ್ಯೆ !
ಮೇಲೆ ಗಗನ ನೀಲತಲ ;
ಕೆಳಗೆ ಮಹಾ ನೀಲ ಸಾಗರಿ....
ಭೋಂಕನೆ ಬಿಳ್ದುದು ಸಾಗರದಾಳಕೆ !
ಭಾರತೀಯ ನತದೃಷ್ಟ ವಿಮಾನ ಕಾನಿಷ್ಕ
ಕೆನಡ ದೇಶದಿಂ ಪಿಂತಿರುಗುವ ಮಾರ್ಗದಲಿ
ಗಗನದಿ ಭೋರನೆ ಸಿಡಿದೊಡೆದು ಬಿಳ್ದುದೆ ?
ಹಾ, ಎಂತಪ್ಪ ಘೋರ ದುರಂತ ?
ಬಿದಿ ರೋಷದಿಂ ಪಾಶ ಒಗೆಯಿತಲಾ ವಿಮಾನಕೆ.
ಮುನ್ನೂರಿಪ್ಪತ್ತೆಂಟು ಬುದ್ಧಿಜೀವಿಗಳ್
ಜಲಸಮಾಧಿಯಾದರ್ ವಿಮಾನ ಸಹಿತ !
ಸಿಡಿದೊಡೆದ ಸಮಯೆ
ಸುಟ್ಟು, ಗಾಯಗೊಂಡು ನೋವುಂಡ ಮೈಗೆ
ಸಾಗರಿಯ ಉಪ್ಪುನೀರು ತಣ್ಪನ್ನೆರೆಯಿತೇ ?
ಹಾ, ಎನುವನಿತರೊಳು ಸಮಾಧಿಯಾದರೇ ?
ಕಂಬನಿಯುಮಿಲ್ಲ; ಸಂಕಟವೂ ಇಲ್ಲ.
ಚಣದೊಳೈತಂದುದು ಮೃತ್ಯು ಮಾಥುರಿ !
ಹಾ, ದೇವಾಧಿದೇವಾ ! ನೀನೆ ರಕ್ಷೆ !
ನೀನೇ ಶಾಂತಿ ಶಾಂತಿ ಶ್ಯಾಂತಿಃ.

—೦—

ಮೂರು ರಾಜ್ಯಗಳ ಗಡಿಕೋಟೆ

ಓ, ಭಗವನ್ ! ಎಂತಪ್ಪ ರೋಮಾಂಚಕವೈ ತವ
ಸೃಷ್ಟಿ ? ನೋಡಿದನಿತು ಕಣ್ದಣಿಯದ, ಭಾವಿಸಿದ-
ನಿತು ಮನತಣಿಯದ ಪ್ರಕೃತಿ ಸತ್ಯಸೌಂದರ್ಯ
ಮೇಣ್ ಅಪ್ಪುತವಾ ಜಗತಂತ್ರಕೆ ಎಣೆಯೇ
ಇಲ್ಲವೈ ! ಆವಾವ ತರತಮದ ತಂತ್ರವೋ ಮತ್ತಾವ
ವಸ್ತು ವಿಶೇಷವೋ ನಿನ್ನದ್ಭುತ ಕೃತಿಗಳಿಂಗೆ ?
ಏಂ ಸೊಗಂ ? ಏಂ ಅದ್ಭುತಂ ! ಏಂ ಗಣತಂತ್ರಂ !
ನಿನ್ನ ಭಾವಿಸುವನಿತರೊಳೆ ಬಾಳ್ ಬದುಕೆಲ್ಲ
ರಂಗಣ ರಿಂಗಣ ಮಾದುದೋ ಎನ್ನೊಡೆಯಾ !
ನಿನ್ನ ಜಾನಿಸುತ ನಿನ್ನದ್ಭುತ ಕೃತಿ ವರ್ಗವ
ನೆನೆದೊಡೆ ಸುಖಮೂರ್ಛೆ ಬರುವುದೈ ತನುಮನಗಳ್
ಮಂತ್ರಮುಗ್ಧವಾಗಿ ನರಸತ್ತ್ವವೊಲ್ ಭಗವನ್ !
ಓವೊ ! **Three Lands Corner** ಅಪೂರ್ವ
ನಿಸರ್ಗದೈಸಿರಿಯಲಿ ಸೇನೊಂದನೆ ಸರಿಯೈ !
ಜರ್ಮನಿ, ಫ್ರಾನ್ಸ್ ಮತ್ತವಾ ಸ್ವಿಡ್ಜರ್ಲೆಂಡುಗಳ
ಸೇರಿಕೆಯ ಅಪೂರ್ವತರ ಬಂಧುತ್ವ ದೃಷ್ಟಿಗೆ
ಎಂತಹ ಅಮೋಘ-ಆನಂದಗಳೋ ಒಡೆಯಾ !
ರೈನ್ ಮಹಾನದಿಯು ಇಬ್ಭಾಗಗಳೊಂದಾಗಿ
ಸೇರುವೆಡೆಯೋಳ್ ಮೂದೇಶಗಳ ಗಡಿಯಂಚು
ಚಾಚಿರಲ್ ವಾಮತೀರ ಫ್ರಾನ್ಸ್, ಬಲ ತೀರವೆ
ಜರ್ಮನಿ ಎನೆ ಪಿಂಬದಿಯೇ ಸ್ವಿಡ್ಜರ್ಲೆಂಡ್ ಕಣ !
ರೈನ್ ನದಿಯು ಇಬ್ಭಾಗದ ಮಧ್ಯೆ ತ್ರಿಕೋಣ
ಆಕಾರದಿ ನೈಗೊಂಡಿರ್ಪ ಭೂಮಿಯು ಮೇಲೆ →

ಪ್ರಕೃತಿಗೆ ಎಣೆಯೆನಿಪ ಸುರ ಸುಂದರ ವೇದಿಕೆ !
ಅದರೊಳ್ ಪಿಂಬದಿಗೆ ಭವ್ಯತರ ಖಾನಾವಳಿ !
ಮುಂಗಡೆಯಲಿ ಸುಭದ್ರವೇದಿಕೆಯ ಮೇಲೊಂದು
ಕರ್ಬುನದ ಗಗನಚುಂಬೀ ಮಹಾಸ್ತಂಭ ! ಅದರ
ಮೂದಿಶೆಯೊಳ್ ಮೂದೇಶಗಳ ಲಾಂಛನಾಶ್ರೀ !
ಸ್ತಂಭದ ಬುಡದಿಂ ಮೇಲ್ವರಿದಿರ್ಪ ಕರ್ಬುನದ
ತೋರ ಪಲಗೆಯ ಮೂಸುರುಳಿಗಳ ಸುಂದರ ರೂಪ !
ಮೂಕಡೆಯ ಸುರುಳಿಯೂ ಮೂದೇಶಗಳ ಲಾಂಛನ
ಮುದ್ರೆಹೊತ್ತು ವಿಜೃಂಭಿಸಿವೆ ಲೋಕಮೋಹಕ
ಶೈಲಿಯಲಿ !
ಓ ! ಸುತ್ತಮುತ್ತಣ ಮಹಾನದಿಯ
ಗಂಭೀರ ಪ್ರವಾಹದ ಮಂಜುಳ ಮಧುರಗಾನ !
ಜರ್‍ರನೆ ಜಲಕೊರೆದು ಪರಿಯುವ ಹಿರಿಯ ನೌಕೆಗಳ್ !
ಸಂದರ್ಶನೀಯ ದೃಶ್ಯಮಾನಕೆ ಮನಮರೆವ
ದೇಶವಿದೇಶೀಯ ಚಿತ್ರವಿಚಿತ್ರ ಜನರಾಶಿ !
ಸುರ ಬಂಧುರ ವೇದಿಕೆಯಿಂ ದೃಷ್ಟಿಕಕ್ಷೆಯೊಳ್
ಮೂದೇಶಗಳ ಮಾನಗರಿಗಳ್ ಇಳಿ ಬಿಸಿಲಿನ
ಸಾಯಂ ಪ್ರಭೆಯಲಿ ಜಗಜಗಿಪ ಅತ್ಯಪೂರ್ವಮಾ
ಸುಂದರ ಚಿತ್ತಾರಮಂ ಮತ್ತೆ ಮತ್ತೆ ಮೇಣ್ಮತ್ತೆ
ನಿಸ್ನಲಿಯೆ ನೆನೆನೆನೆದು ಪರಿಭಾವಿಸು ಮನವೇ !
ಮೂದೇಶಗಳ ಬಾಂಧವ್ಯದ ಪರಮ ಪವಿತ್ರತಮ
ಭೂಮಿ **Three Land's Corner** !
ಓವೋ !
ಆಶುಕವಿತೆ ಉಕ್ಕುಕ್ಕಿ ಹರಿವುದಲಾ ಹೃದಯ
ಸಮುದ್ರವೆ ಉಕ್ಕಿ ಹರಿವವೊಲ್, ವರಚಿತ್ತಾರಂ
ನೆನೆಯೆ ಮನದಲಿ ! ಸೃಷ್ಟಿಸ್ಥಿತಿ ನೀನಲ್ತೆ ಭಗವನ್ !

—o—

ಬೃಹದೇಶ್ವರಾ

ಆವೂರು ಈವೂರು ಶಿವನ ತಂಜಾವೂರು
ಕಣ್ತುಂಬ ನೋಡೊಮ್ಮೆ ನೀಂ ಮಣ್ಣು ಹುಡಿಯಲ್ಲಿ
ಮಣ್ಣಾಗಿ ಬೆರೆತು ಹೋಗುವ ಮುನ್ನ ಎಲೆ ತಂಗಿ !
ತಂಜಾವೂರಿನ ಹೊರವಲಯದ ಮಹಾವಿಶಾಲ
ಭುವಿಯಲಿ ನೆಲೆಗೊಂಡಿಹ ಬೃಹದೇಶ್ವರನಂ ನೋಡು !
ಮನಮೋಹಸೀಯ ಕರಕೌಶಲದಲಿ ಮೈಗೊಂಡ
ಗಗನಚುಂಬೀ ಗೋಪುರದ ಬೃಹತ್ ಶಿವಾಲಯು !

ಸ್ವಾಮೀ ! ತವಸೃಷ್ಟಿಯೆನಿತು ಲೀಲಾಜಾಲವೋ
ಅನಿತೆ ಭಂಗದಿಂ ನಿನ್ನ ವರಪೂಜೆಗೆಂದೇ
ಬೃಹತ್ ಶಿವಾಲಯವ ನಿರ್ಮಿಸಿಹರಲ್ತೆ ಜನ
ಕೋಟಿ ಭಕ್ತಿಯಿಂ ಕಲ್ಲಮೇಲೆ ಕಲ್ಲನಿಟ್ಟು !
ಅಹಃ, ಏಂ ಶ್ರೀಮಂತ ಸೌಂದರ್ಯ ಶಾಲಿಯೋ
ಬೃಹದೇಶ್ವರಾ ! ಸಿನ್ನ ತಾಣ, ನಿನ್ನ ಸ್ವರೂಪ
ಇವುಗಳಿಗೆ ಸಾಟಿಯಿನ್ನುಂಟೆ ಈ ಧರಣಿಯಲಿ ?

ಒಡೆಯಾ ! ತವಸ್ವರೂಪ ದರ್ಶನಂ ವಿಕೃತಿಯು
ಮನಮಂ ಕೊರೆಕೊರೆದು ತುಂಬುವುದೈ ಭಕ್ತಿರಸ
ಮೇಣ್ ಜ್ಞಾನರಸಂಗಳಂ ಮತಿಶಿಖಿ ದಳ್ಳಿಸಿ
ಹೋಹಂದದಲಿ !

ಗರ್ಭಗುಡಿಯಲ್ಲಿ ಮೂವತ್ತೆರಡು
ಅಡಿಯೆತ್ತರದಾ ಪೀಠಮಂಡಿತ ಶಿವಲಿಂಗಂ
ಹದಿಮೂರು ಅಡಿಯೆತ್ತರವೆನೆ ಭಾವಿಸು ಮನವೆ !
ಕಸ್ತೂರಿ ಗಂಧಲೇಪಿತ ಕಂಪಿನ ಸೊಂಪಿನ
ಜಗದ್ಭವ್ಯ ಮೂರ್ತಿಯಂ ನೋಡಿದನಿತು ದಣಿಯದು →

ಕಣ್ ; ಭಾವಿಸಿದನಿತು ತಣಿಯದು ಮನಮೆನೆ ಭವ್ಯ
ಆಲಯಕೊಪ್ಪುವ ದಿವ್ಯ ಮೂರ್ತಿಯೆ ದಿಟಂ ಕಣಾ !
ಕಲೆಯ ಬಲೆಯೊಲ್ ತೋರ್ವ ಪೌಳಿಯಿಂ ಬೃಹತ್ತಮ
ಸ್ತಂಭಗಳಿಂ ಸಾಲುಸಾಲ್ಗೈಸಿದ ಗಣಪತಿಗಳಿಂ,
ಸಹಸ್ರತರ ಲಿಂಗಗಳಿಂ, ಸಹಸ್ರತರ ಬಸವ
ವಿಗ್ರಹಗಳಿಂ ಒಪ್ಪುವ ದೇಗುಲಂ ಬೃಹದ್
ದ್ವಾರಪಾಲಕ ಶಿಲಾಮೂರ್ತಿಗಳ ಶ್ರೀರಕ್ಷೆಯು
ಆಮೋದದಲಿ ಮೈಮರೆಶವೊಲ್ ಪ್ರಶಾಂತಂ ?
ದೇಗುಲದ ಸಿರಿಗೋಪುರದಲಿ ರಂಜಿಪ ಮಹಾ
ಪರಮೇಶ್ವರ ಪರಿವಾರದ ಅಖಂಡ ಶಿಲೆಯ
ಮಹೋನ್ನತ ಮೂರ್ತಿರಾಜಿ ! ಅದಂ ಶಿಲೆಯಿಂ ಕಡೆ-
ದರೊ ಬೆಣ್ಣೆಯಿಂ ಕಡೆದರೊ ಎಂಬನಿತು ಸೂಕ್ಷ್ಮಂ!
ಮೇಣಿನ್ನೊಂದು ಖಣಿಯೆಂದೊಡೆ ಗರ್ಭಗುಡಿಗೋಪುರ
ಬಳಿಯಿರ್ದ ಪೀಠಕೆಂತೇರಿಸಿದರೋ ಶಿವನ
ಪರಿವಾರ ತುಂಬಿದ ಬೃದದ್ ವಿಗ್ರಹ ರಾಜಿಯಂ !
ಸಾರಿಗೆ ಸುಖಮಿನಿತಿಲ್ಲದ ಕಾಲದಲಿ ಎನಲ್
ಅದೆಂತು ಕಡು ಅಚ್ಚರಿಯೆನೆ ಮಿಥ್ಯ ಕಥನಮೋ
ಸತ್ಯ ಕಥನಮೋ ಆ ಬೃಹದೇಶ್ವರನೆ ಬಲ್ಲಂ !
ಅತಿ ಉದ್ದಗಲ ಹಬ್ಬಿದ ದೇಗುಲದ ವಿಸ್ತೀರ್ಣಂ
ಕಣ್ಮನಗಳಿಗೆ ತೋಷಮಾತ್ರಮಲ್ತು ಶಾಂತಿ-
ಸಮಾಧಾನಂಗಳ ಮೇಣತಿ ಭಕ್ತಿಭಾವಮಂ
ತುಂಬಿ ತಣಿಪುದು ದಿಟಂ ಭಕ್ತಜನ ಕೋಟಿಯಾ !
ಕವಿತಾರಮಣಿಯು ಹಾಡಿ ಪಾಡಿಸಿ ಮನಮೋದಿಸಿ
ಶಾಂತಿವಾರಿಯಲದ್ದಿ ತೇಲಿಸುವನ್ನೆಗಂ ಮಮ
ಬೃಹದೇಶ್ವರ ಮುಂದೈದುವಂ ಸಂತಸದುಣಿಸನಿಕ್ಕಿ.
ನಮೋನ್ನಮಃ ಬೃಹದೇಶ್ವರಾ !

—o—

ಅರಣ್ಯಾನಿ

ಪಚ್ಚವರ್ಣಾಂತ ಪರ್ಣಾರ್ಣವದಲಿ
ಬೆಳ್ದಳಿರು, ಹೊಂದಳಿರು, ಹಸುರ್ದಳಿರು, ಹರಿದ್ರದಳಿರು,
ಕೆಂದಳಿರು, ಚೆಂದಳಿರುಗಳ ಆಲೋಕ
ತಂಗಾಳಿಯ ಮುದ್ದಿಗೆ ಮೈಮರೆತು
ಮರ್ಮರರಾಗವ ಹಾಡಿ ತುಯ್ಯಲಾಡುತಿವೆ ಅತ್ತಿತ್ತ.
ಪಲ್ಲವ ಪಾಣಿಗಳಲಿ ವಿವಿಧ ವರ್ಗದ,
ವಿವಿಧ ವರ್ಣದ, ವಿವಿಧವೇಶದ ಕುಸುಮರಾಜಿಯು
ಮೃದು ಮಧುರ ಸಮ್ಮೇಲನ ನಡೆದಿದೆ
ರಂಗುರಂಗಿನ ಆವೇಶದಿಂ !
ಸಣ್ಣ ಪುಟ್ಟ ದೊಡ್ಡ ಪತಂಗಗಳ್ ಪೂವಿಂ ಪೂವಿಗೆ
ಪಾರಾಡುತಿರೆ ಏಂ ಸೊಗವೊ ನೋಳ್ಪ ದೃಷ್ಟಿಗೆ.
ಭ್ರಮಂತ ಭ್ರಮರಗಳ್ ಝೇಂಕರಿಸುತ
ಮುತ್ತುತಿರೆ ಪುಷ್ಪಕೋಟಿಯಂ.
ಭ್ರಮರ ಭಾರದಿಂ ಮೇಣ್ ಕ್ಷತದಿಂ
ಮೆಲುಮೆಲ್ಲನೆ ಜೋಲು ಬೀಳುತಿವೆ ಪುಷ್ಪಾಳಿ.
ಭ್ರಮರ ಝೇಂಕಾರ ಓಂಕಾರವಾಗಿ
ಮೊಳಗೆ ಅರಣ್ಯಾನಿ ಪುಳಕಿತಮಪ್ಪವೊಲ್.
ಅರಣ್ಯಮೆಲ್ಲ ಮಧುರಮಯಂ !

ಅಲ್ಲಲ್ಲಿ ಗುಡಿಗೋಪುರದೊಲ್
ಪೈವೆತ್ತ ಹಾವಿನ ಹುತ್ತಗಳ್ ಮೇಣಲ್ಲಲ್ಲಿ
ಹೆಡೆಯಾಡಿಸುವ ನಾಗರ ಹಾವುಗಳ್,
ಮೊಲ, ಅಳಿಲು, ಕಬ್ಬೆಕ್ಕು, ಜಿಂಕೆ,
ಕುರಿ ಇತ್ಯಾದಿ ಪ್ರಾಣಿಗಳ್ →

ಒಳಗೊಳಗೆ ಓಡಾಡುತಿರೆ ಸಾನಂದದಿಂ
ಅಮಿತಾನಂದ ಮೋದದಾ ಸಂಚರಣಂ !
ಮತ್ತೆ ಜೀರ್ದುಂಬಿಗಳ ಜೀರ್‍ದನಿ ಜೀಽಽಽಽಯ್ !
ಜೀಽಽಽಽಯ್ ! ಜೀಽಽಽಽಯ್ !
ರುದ್ರ ಗಾಂಭೀರ್ಯ ಮೌನಮಂ
ಸೀಳುವಂದದಿ ಸಂಪ್ಲವಿಸುತಿತ್ತು
ಜೀಽಽಽಽಽಯ್ ! ಜೀಽಽಽಽಯ್ !
ಜೀರ್ದನಿ ಎಡೆವಿಡದೆ.
ಕಣಿವೆ ಕಂದರಗಳಂ ವ್ಯೆಗೊಂಡ
ಭವ್ಯ ಪರ್ವತಗಳ ಶ್ರೇಣಿಯಲಿ
ಗುರುಗಿ ಗಿಡಗಳ ಸುಮ ಸಮುಚ್ಚಯಗಳಲಿ
ಹೆದ್ದುಂಬಿಗಳ ಸಮ್ಮೇಲನ ನಡೆದಿರೆ ;
ಮೇಣ್ ಶುಕ, ಪಿಕ, ಕೋಗಿಲೆ, ಕಾಜಾಣ
ಇತ್ಯಾದಿ ಪಕ್ಷಿಸಮಾಜ ಉಲಿವ–
ಮನತುಂಬಿ ಕೊರಳ್‌ತುಂಬಿ ಉಲಿವ–
ರಾಗಾರುಣ ತಾನದ ಮೋಹನೀಯ
ಸ್ವರ ಮಾಲೆಯು ಕೇಳಾ !
ಬೃಹದ್ ಅರಣ್ಯಾನಿಯಂ ಇಬ್ಭಾಗಗೊಳಿಸಿ
ಬೋರ್ ಬೋರನೆ ಮುನ್ನುಗ್ಗುವ
ಕಪಿಲಾನದಿಯ ವಿಲಯ ವಿಪ್ಲವಲೀಲೆ.
ಭೀಮರೋಷದ, ನೀರೆಯ ರಾಮಣೀಯಕ
ನಿಚ್ಚ ನಡೆಯ ಸಂವೇದನೆಯಂ ಕಾಣಿರೋ....
ನದಿಯ ಮಹಾಪೂರದಲಿ.

—೦—

ಸಬಕ್ತಗೀನ್

೧

    ಪುರಾಣ ಕಾಲೀನ ಮುಂಬೆಳಗು
ಪಡಿ ಮೂಡುವ ಮುನ್ನಮೆಯೆ ಹೂಬೆಳಗು
ಬ್ರಹ್ಮನ ಕಮಂಡಲದಿಂ ತುಳುತುಳುಕಿ
ಚೆಲ್ಲಿದವೊಲ್ ಪಸರಿಸಿತು ಲೋಕದೊಳ್ !
ಇನಿದನಿಯಲಿ ಹಾಡುತಿದೆ ಕೋಗಿಲೆ
ಕುಹೂ ಕುಹೂ ಕುಹೂ ರಾಗದಲಿ.
ಮುಂಬಕ್ಕಿಗಳೆದ್ದುವು ರೆಕ್ಕೆಗಳ ಪಟಪಟಿಸಿ.
ಮಂದಮಂದಾನಿಲ ಬೀಸಿವೀಸಿ
ಸುಳಿಸುತ್ತುತಿಹನ್ ಲೋಕಮೋಹಕವಾಗಿ !

    ಸಬಕ್ತಗೀನ್ ಮಲಗಿಹನಿನ್ನೂ
ನಿದ್ರಾದೇವಿಯ ಮಡಿಲಲ್ಲಿ ಮುದ್ದು ಮಗುವಾಗಿ.
ಪೂರ್ವೀ ದಿಗಂತದ ನೀಲಿಮಲಿ
ಮೂಡಿದನ್ ಮೂಡಣರವಿ ಅರುಣಕಿರಣಗಳ
ಸುಂದರ ಜಾಲವ ಹರಿಸಿ.
“ಸಬಕ್ತಗೀನ್, ಸಬಕ್ತಗೀನ್ !”
ಕೇಳಿದುದು ಕರೆ ಇನಿದನಿಯಲಿ
ಸಬಕ್ತಗೀನ್ ಹೊದ್ದ ಹಚ್ಚಡವ ಸರಿಸಿ
ಕಣ್ಬಿಟ್ಟು ನೋಡಲಾ ಬಳಿಯೊಳ್
ನಿಂತಿರ್ದ ಮಡದಿ ನುಡಿದಳಿಂತು,
“ಏಳೈ, ಮುಂಬೆಳಗು ಮೂಡಿತು.
ಇಂದು ನೀಂ ಬೇಂಟೆಗುಯ್ಯದಿರೆ
ಸಾರಿಗಾವ ಗತಿಯಿಲ್ಲ ; ಬೇಂಟೆಗೆ ಪೋದೊಡೆ →

ಏನಾದರು ದೊರೆಕೊಂಬುದು
ನೀಂ ವಿಳಂಬಿಸದಿರ್ !"
ಅಂತೆಂದ ಮಡದಿಯ ಮಾತನು ಮಾನಿಸಿ
ಬಿಲ್ಲು ಬಾಣಗಳೊಡನೆ ಪೊರಮಂಟನಾ
ಸೈನಿಕ ಸಬಕ್ತಗೀನ್.

೨

ತೇಜಿಯನೇರಿ ಅಡವಿಯೆಡೆಯಲಿ
ಸಾಗುತಿರೆ ಕಂಡುವೆನಿತೊ ಪ್ರಾಣಿಗಳ್ !
ಆದೊಡೇಂ ಬಿಲ್ಲಂ ಪೂಡುವನಿತರೊಳೆ
ತೆಕ್ಕನೆ ಕಣ್ಮಾಯವಾದುವು ಮಿಂಚಿನೊಲ್ !
"ಏಂ ಚುರುಕು ! ಏಂ ಬುದ್ಧಿ ! ಅಹಾ,
ಎನಗಿಂತ ಅವೇ ಮೇಲು !"
ಎನುತೆನುತೆ ಮನದಲಿ, ಓಡಿಸಿದನವ
ತೇಜಿಯಂ ಮುಂದು ಮುಂದಕೆ.
ಪೊಳ್ತು ಮೇಲೇರಿದುದು. ಸುತ್ತಿಸುತ್ತಿ
ಹಸಿವು ಬಾಯಾರಿಕೆಗಳ್ ಮೂಡಿ
ಬಳಲಿದನಾ ಸೈನಿಕ. ಮೇಣ್
ತೇಜಿಯುಂ ಬಲು ಬಳಲಿದುದು ಬಾಯಾರಿ.
ಸಬಕ್ತಗೀನ್ ತೇಜಿಯಿಂದಿಳಿದು
ಎಲ್ಲಿ ಯಾವೆಡೆಯೊಳ್ ಕೊಳವಿರ್ಪುದೆಂದು
ಪುಡುಪುಡುಕುತ ಅಲೆದನ್ ಕಾಡಿನಲಿ.
ಮುಂದೆ ನಸು ದೂರದಲಿ ಕಾಣಿಸಿತೊಂದು
ತಿಳಿನೀರಿನ ಪುಷ್ಕರಣಿ.
ಸಬಕ್ತಗೀನ್ ತೇಜಿಯಂ ನೀರಿಗೆ ಬಿಟ್ಟು
ತಾನೂ ನೀರ್ಕುಡಿದು ದಗೆಯನು ಪರಿಹರಿಸಿ
ತೇಜಿಯಂ ಮೇಯಲು ಬಿಟ್ಟು →

ದಣಿವಾರಿಸಿಕೊಳೆ ಕುಳಿತನ್ ಮರದ ಕೆಳಗೆ.
ದೂರದ ಕೆರೆಯಂಚಿನಲಿ
ಕಂಡನೊಂದು ತಾಯ್ಜಿಂಕೆ ಮರಿಯೊಡನೆ
ನೀರಿಗಿಳಿತಂದು ನೀರ್ ಕುಡಿಯತೊಡಗಿದುದಂ.
ಆಗಲಾ ಸಬಕ್ತಗೀನ್ ಬಿಲ್ಲುಬಾಣಗಳ
ಕೈಕೊಂಡು ಗುರಿಯಿಟ್ಟು ಹೊಡೆಯೆ
ಪುಣ್ಯವಶದಿಂ ಗುರಿತಪ್ಪಿ ಜಿಂಕೆಯು ಪಾರಾಗಿ
ಓಡಿಪೋದುದಲ್ಲಿಂದೆ.
ಸಬಕ್ತಗೀನ್ ಬಿಲ್ಲು ಬಾಣವ ಬಿಸುಟು
ಓಡುತ ಪೋಗಿ ಮರಿಯಂ ಪಿಡಿದು
ಮುದ್ದಾಡಿದಂ ನಲ್ಮೆಯಿಂ ಬಿಗಿದಪ್ಪಿ.
ಆದೊಡೇಂ ? ಮರಿ ಭಯದಿಂ
ಚೀರಾಡಿ ಅರಚಿದುದು ತಾಯಿಯಂ ಬಯಸಿ.
ಮಿಲಿಮಿಲಿ ಗೊಳುತಿರ್ದದಂ ಬಿಗಿವಿಡಿದು
ಸಬಕ್ತಗೀನ್ ಬಿರುಬಿರನೆ ನಡೆಯುತ
ಹಿಂತಿರುಗಿದನ್ ತೇಜಿಯೆಡೆಗೆ.
ಮರಿಯ ಚೀರಾಟವಂ ಕೇಳ್ದಾತಾಯಿ
ನೊಂದು ನೀರಾಗಿ ಪಿಂತಿರುಗಿ ಬಂದುದು
ಕರುಳಿನ ಕರೆ ಕೇಳಿ.
ಕಂಗಳಲಿ ಆಸೆಯು ಬೆಳಕಂ ಸೂಸುತ
ಕೂಗಿದುದು ಅರಚಿದುದು ಮರಿಗಾಗಿ.
ತಾಯಿಯ ಕರೆ ಕರುಳಂ ಕೊರೈಸುವಂದದಿ
ಹೊಮ್ಮಿ ಬರಲ್ ಒಂದುಗಳಿಗೆ
ಅಲ್ಲಿಯೆ ನಿಂದನಾ ಸಬಕ್ತಗೀನ್.
ಕೈಯಲಿ ಮಿಲಿಮಿಲಿಗೊಳುತ ಚೀರಿಡುವ ಹೂಮರಿ,
ದೂರದಿ ಕೂಗಿ ಕರೆಯುತಿಹ ತಾಯ್ಜಿಂಕೆ ! →

ಸಬಕ್ತಗೀನ್ ಮರುಗಿದನು ಮನದಿ
ನೋಡುತಿರೆಯಿರೆ ಸಬಕ್ತಗೀನ್,
ಮೆಲ್ಲಮೆಲ್ಲನೆ ಹೆಜ್ಜೆ ಯಿಡುತಲಿ
ಬರುತಿದೆ ಬರುತಿದೆ ತಾಯ್ಜಿಂಕೆ ಜೀವದಾಸೆಯ
ಬಿಟ್ಟು ಕಂಗಳಲಿ ಕಣ್ಣೀರ್ ಸುರಿಸುತ.

೩

ಸಬಕ್ತಗೀನನ ಕೈಯೊಳ್ ಮಿಲಿಮಿಲಿಗೊಂಬ
ಮರಿಯನು ಕಂಡು ನುಡಿಯಿತಾ ತಾಯ್ಜಿಂಕೆ
ದುಃಖಸಂಕಟ ತುಂಬಿದ ದನಿಯಲಿ,
"ಅಯ್ಯಾ, ಸಬಕ್ತಗೀನ್ !
ಮೂದಿಂಗಳ ಮರಿಯೆನ್ನ
ಹುಲ್ಲು ತಿನ್ನಲರಿಯದು ; ಬದುಕದು ಹಾಲಿಲ್ಲದೆ.
ಹಾಲೂಡದಕೆ ಆನಿರಲಾರೆ.
ನೀನೆಮ್ಮ ಸಂಕಟವರಿತು ಕಂದನಂ
ಬಿಡುಗಡೆಮಾಡಿ ಪುಣ್ಯಶಾಲಿಯಾಗೈ !"
ಆರ್ತತೆಯಿಂ ಪೊದಳ್ದದರ ನುಡಿಯಂ
ಕೇಳ್ದು ಸಬಕ್ತಗೀನ್ ಮರುನುಡಿಯಂ
ಎರ್ದೆಯಾಳದಿಂ ಬರಿಸಿದಂ,
"ಆಯಿತು ; ಈಗಳೆ ಬಿಡುಗಡೆಗೈವೆ.
ನಿನ್ನ ಒಡಲುರಿಸಲಾರೆ. ಇದೆಕೊ,
ನಿನ್ನ ಮುದ್ದು ಕಂದನ ಕರೆದೊಯ್ದು ಪಾಲಿಸೈ !"
ಎಂದು ಕೈವಿಟ್ಟನಾ ಮರಿಯಂ !
ಆಗಳಾ ಮರಿ ಓಡುತ ಪೋಗಿ ಕೂಡಿತು
ಮುದದಿಂ ತಾಯಿಯಂ ! ಕಂಡನಾದೃಶ್ಯಮಂ
ಕಣ್ತುಂಬ ಬ್ರಹ್ಮಾನಂದ ಮೋದದಿಂ !

ಆಹಃ, ಎಂತಪ್ಪ ಪ್ರೀತಿಯಾಕರ ? ನನ್ನ
ಗುರಿ ತಪ್ಪಿದುದು ಆವ ದೇವನ ಕರುಣೆಯೋ ಎನಿಸಿ
ಕರುಣೆಯು ಕಟ್ಟೆಯೊಡೆದುದು
ತುಂಬಿದ ಅಣೆಕಟ್ಟೆ ಒಡೆದವೊಲ್ ಒಡಲ್
ಆನಂದದ ಮೋದದಿಂ ತುಂಬುವನ್ನ.
ತಾಯ್ಮರಿಗಳಾ ತಾಣವಂ ಬಿಟ್ಟು ತೆರಳು-
ವನ್ನೆಗಲ್ಲಿ ತಾನಿರ್ದು ಮನದಿ ಸುಖದುಃಖಗಳ ತುಂಬಿ
ಪಣತೊಟ್ಟನಾ ಸಬಕ್ತಗೀನ್ "ಆನಿನ್ನು
ಮಾಂಸಾಹಾರವಂ ಮುಟ್ಟೆನ್ !
ಪ್ರಾಣಿವಧೆಯನೆಂದೂ ಮಾಡೆನ್ !
ಮುಂದೆ ಸಸ್ಯಾಹಾರ ಎನ್ನ ಬರ್ದುಕಿಗೆ ಸಾಲ್ಗುಂ !
ಇಂದೆನ್ನ ಜೀವನದಲಿ ಖಂಡಿತ ಸುದಿನ !"
ಎನಲ್ಕೆ "ಹೌದು, ಹೌದು !" ಎಂದುತ್ತರಿಸಿತೊಂದು
ಅಶರೀರವಾಣಿ. ಸಬಕ್ತಗೀನ್
ಆನಂದ ಮೋದದಿಂ ಪಿಂತಿರುಗಿದನ್ ತನ್ನ ಕುಟಿಗೆ.

—o—

ನಿನ್ನ

ನಿನ್ನ ಕಂಡ ಮೇಲಿನ್ನು
ಆರ ಕಾಣಲಕ್ಕು ?
ನೀನಲ್ಲದಿನ್ನುಂಟೇ
ಈ ಬ್ರಹ್ಮಾಂಡಕೆ ?

—o—

ಕಸ್ತೂರಿ ಎನೆ ಎನಿತು ಆಹ್ಲಾದಮೋ ಅನಿತೆ
ರಸಸ್ಫೂರ್ತಿಯಾಗರಂ ; ಮೃದು ಮಧುರ ಸುಂದರಂ !
ನಲ್ ಪರಿಮಳಂ ಪೆಸರೊಡಂ ತುಂಬಿ ಬಹುದೋ
ಎಲೆಗಳ ಪ್ರಸರಣಮೋ ತೆನೆಗಳ ಪ್ರಸರಣಮೋ
ಎನುತಚ್ಚರಿಪಡುವೊಲ್ ಸುಸುಂದರ ಬಂಧುರಂ !
ಕಸ್ತೂರಿ ! ಕಾಮ ಕಸ್ತೂರಿ ! ನೀಲಗಪ್ಪಿನ
ಕಸ್ತೂರಿ ! ತಳಿರ ತೆನೆಯಲಿ ಧವಳಿಮಾ ಕುಸುಮ
ಕೀರುತಿ ! ನರುಗಂಪಿನ ಮೋಹಕತೆಯ ಮುಂಗುಡಿ !
ಸಕಲ ದೈವಾರಾಧನೆಗೆ ಒಪ್ಪುವ ಚೆಂಗುಡಿ !
ಕಸ್ತೂರಿ ಮೊಲ್ಲೆಯರಳು ಮೊಗ್ಗೆಯೊಡಂ ಕಾಮ
ಕಸ್ತೂರಿಯುಂ ಕೋದು ನೆಯ್ದ ಪೂಮಾಲೆಯುಂ
ಚೆಂದದಿಂ ತೊಡಿಸೆ ಬಾಲ ಮುಕುಂದನಾ ವದನ
ಮಂಡಲಂ ಅರಳರಳಿ ಮುಗುಳೊಡೆವುದ ನೋಡಾ !
ಹರ್ಷವನೆ ಹರ್ಷಿತಗೊಳಿಸುವ ಪರಮಾನಂದ
ಮಾಳ್ಕೆಯಲಿ ಎನಲ್ ಪರಿಭಾವಿಸಿ ನೋಡೈ ಬಂಧು !
ಮಧುಮತ್ತ ಇಂದಿಂದಿರ ಶೋಭೀ ಕಸ್ತೂರಿ
ಬನದಿ ಝೇಂಕಾರದುಲಿ ಓಂಕಾರದೊಲ್ ಮೊಳಗಿ
ಅಂತರಂಗವ ಮುಟ್ಟಿ ತನುಮನ ಮಂತ್ರಮುಗ್ಧಂ !
ಮಲ್ಲಿಕಾ ಕಾವ್ಯಕಾನನ ಶೋಭೀ ಕಸ್ತೂರಿ
ಲೋಕ ಮೋಹನ ಸುಂದರಂ ಪರಮ ಬಂಧುರಂ.

—೦—

ಮಲ್ಲಿಕಾ ಕೃತಿಗಳು

೧) ಜೀವನಗಂಗಾ
೨) ಡಾ|| ಅಘೋರ
೩) ಡಾ|| ಕಮಲೇಶ್
೪) ವಂದೇ ಮಾತರಂ
೫) ಅನಂತಾನಂತದೆಡೆಗೆ

(ಕಥಾ ಸಂಕಲನ)

೬) ಶ್ರೀಮುಖಿ
೭) ಬಹುರತ್ನಾವಸುಂಧರಾ
೮) ರತ್ನಗರ್ಭಾವಸುಂಧರಾ

(ಕವಿತಾ ಸಂಕಲನ)

೯) ಪೂಜಾವಸಾನ ಸಮಯೇ....!
೧೦) ಧ್ಯಾನಾವಸಾನ ಸಮಯೇ....!

(ಪೌರಾಣಿಕ ನಾಟಕ)

೧೧) ಪುಣ್ಯಪಯೋನಿಧಿ
೧೨) ಪುಣ್ಯಾಭಿಸಾರ

(ಇವುಗಳ ಪ್ರತಿಗಳು ಮುಗಿದಿವೆ)

ಎರಡನೆಯ ಮುದ್ರಣಗಳು

(ಸಾನೆಟ್ಸುಗಳು)

೧೩) ತರಂಗಿಣಿ

(ಕಥಾ ಸಂಕಲನ)

೧೪) ಸುಧಾಮಣಿ
೧೫) ರಮಣೀಮಣಿ
೧೬) ಲಿಯೋನಾ
೧೭) ಶ್ರೀಹರ್ಷಲಾ
೧೮) ವೈಶಾಖೀ ಪರ್ವ
೧೯) ಫಾಲ್ಗುಣೀ ಪರ್ವ

(ಕಾದಂಬರಿಗಳು)

೨೦) ಮನೋನ್ಮಣಿ
೨೧) ಸಂತ್ರಾಸಿನಿ
೨೨) ಆಸೆಯ ಸುಳಿಯಲ್ಲಿ

ಮಲ್ಲಿಕಾ ಕೃತಿಗಳು

(ಕವಿತಾ ಸಂಕಲನ)

೨೩) ಗಗನ ಕುಸುಮ
೨೪) ಜೀವನ ಕುಸುಮ
೨೫) ಕಸ್ತೂರಿ ಮಾಲಿಕಾ
೨೬) ಮಂದಾರ ಮಾಲಿಕಾ
೨೭) ಚಂಪಕ ರಾಜಿ
೨೮) ಬಕುಳ ರಾಜಿ
೨೯) ವಿಜಯ ಗಾಥಾ
೩೦) ಗಾನ ತೀರ್ಥ
೩೧) ನಾದ ಬಿಂದು
೩೨) ಕಲ್ಯಾಣ ಭಾರತಿ (ಅಚ್ಚಿನಲ್ಲಿ)
೩೩) ಕಾವ್ಯಾನಂದ ನಂದಿನಿ
೩೪) ಭಾವಾನಂದ ನಂದಿನಿ

(ಸಂಜೀವನ ಕಾವ್ಯ)

೩೫) ರಾಗಾನುರಾಗಿಣಿ
೩೬) ಉತ್ತರೋತ್ತರಣಿ
೩೭) ಮಂಗಳ ಭಾರತಿ

(ಗದ್ಯ ಕಾವ್ಯ)

೩೮) ಐಂದ್ರ ಕೀರ್ತಿ ಕೇತನಂ

(ಉಪನಿಷತ್ಕಥಾ)

೩೯) ಕೃತಂ ಸ್ಮರ ಕ್ರತುಂ ಸ್ಮರ

(ಶಿಶು ಸಾಹಿತ್ಯ)

೪೦) ದೂರ ದೇಶದಲ್ಲಿ
೪೧) ಬೆಳದಿಂಗಳ ರಾತ್ರಿ
೪೨) ವಿಶೇಷ ಸುದ್ದಿ
೪೩) ರಂಗನ ಸಾಹಸ
೪೪) ಓಹಿಯೋಜ ಸರೋವರ
೪೫) ಕೌಶಿಕನ ಗೊಂಬೆ

ಲಕ್ಷ್ಮೀ ಪ್ರಕಾಶನ
170, ಲ್ಯಾಂಗ್ ಫೋರ್ಡ್ ರೋಡ್, ಬೆಂಗಳೂರು–560 025